ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 34 ಅಗಸ್ಟ್ 24, 1986 ಬೆಲೆ 80 ಪೈಸೆ.

ಒಳಗೇನಿದೆ?....

	ಪುಟ
□ ಖಲಿಸ್ತಾನ್ ಉಗ್ರಗಾಮಿಗಳು : ಒಂದು ಹಿನ್ನೋಟ	4.5
□ ಮಾನವತಾವಾದಿ ಟಾಗೋರ್	7
○ ನಾಲ್ಕನೇ ವೇತನ ಆಯೋಗದ ವರದಿ: ಒಂದು ಪರ್ವತ ಪ್ರಸವ	2
□ ರಾಷ್ಟ್ರೀಯ ಸಮಗ್ರತಾ ವಾರಾಚರಣೆ	3
□ ಇನ್ನೂ ಹಲವಾರು ಸುದ್ದಿಗಳು.	

ಪಾಕಿಸ್ತಾನದಲ್ಲಿ ಪ್ರಬಲ ಜನತಾ ಹೋರಾಟ

–ಎನ್. ಕೆ. ಉಪಾಧ್ಯಾಯ

ಕಳೆದ ಹತ್ತು ವರ್ಷಗಳಿಂದ ಪಾಕಿಸ್ತಾನ ನಿರಂತರ ಸೈನಿಕ ಆಡಳಿತೆಯ ಸೆರೆಮನೆಯಾಗಿದೆ. ನಾಗರಿಕ ಹಕ್ಕು, ಪ್ರಜಾಪ್ರಭುತ್ವದ ಕೊಲೆಯಾಗಿದೆ. ವಿರೋಧ ಪಕ್ಷಗಳು ನಡೆಸುತ್ತಾ ಬಂದ ಚಳುವಳಿಗಳನ್ನು ದೈತ್ಯ ಕ್ರಮದಿಂದ ದಮನ ಮಾಡಲಾಗುತ್ತಿದೆ. ಜಿಯಾನ ಮಿಲಿಟರಿ ಆಡಳಿತೆಯಿಂದಾಗಿ ಬೇಸತ್ತ ಪಾಕಿಸ್ತಾನದ ಜನತೆ ವಿರೋಧ ಪಕ್ಷಗಳ ಕರೆಯ ಮೇರೆಗೆ ದಂಗೆ ಎದ್ದಿದ್ದಾರೆ. ಜನರಲ್ ಜಿಯಾ ಉಲ್ ಹಕ್‌ನನ್ನು ಪದಚ್ಯುತಿಗೊಳಿಸಿಯೇ ತೀರುತ್ತೇವೆಂದು ಪಣ ತೊಟ್ಟು ಹೋರಾಟಕ್ಕಿಳಿದಿದ್ದಾರೆ. ಪ್ರಜಾಸತ್ತೆಯ ಪುನರುತ್ಥಾನ ಮಾಡಿಯೇ ತೀರುತ್ತೇವೆಂದು ಕಹಳೆ ಊದಿದ್ದಾರೆ ಬೀದಿಗಿಳಿದಿದ್ದಾರೆ. ಕಾಳಗ ನಡೆಸಿದ್ದಾರೆ.

ಈ ವರ್ಷದೊಳಗೆ ಚುನಾವಣೆಯಾಗಬೇಕೆಂದು ಒತ್ತಾಯಿಸಲು ಆಗಸ್ಟ್ 15 ರಂದು ಪ್ರಜಾಸತ್ತೆಯ ಉಳಿವಿಗಾಗಿ ಬೆನಜಿರ್ ಬುಟ್ಟೋ ಅವರ ನೇತೃತ್ವದ ವಿರೋಧ ಪಕ್ಷಗಳು ಬೃಹತ್ ರ್‍ಯಾಲಿ ಏರ್ಪಡಿಸಿದ್ದರು. ಸರಕಾರ ಅಂದೇ ಏರ್ಪಡಿಸಿದ್ದ ಸಭೆಗೆ ಜನರು ಬರುವುದಿಲ್ಲೆಂದು ತಿಳಿದ ಜಿಯಾ ಸರಕಾರ ತನ್ನ ಕಾರ್ಯಕ್ರಮವನ್ನು ರದ್ದುಗೊಳಿಸಿ, ವಿರೋಧ ಪಕ್ಷಗಳ ಸಭೆ ಆಗದಂತೆ ಪ್ರತಿಬಂಧ ಹೇರಿ ಬೆನಜಿರ್ ಅವರನ್ನೊಳಗೊಂಡು ಸಾವಿರಾರು ಮುಖಂಡರನ್ನು ಬಂಧಿಸಿತು. ಅದರ ಪ್ರತಿಭಟನಾರ್ಥ ಜನತೆ ಧೀರಹೋರಾಟ ನಡೆಸಿ ಈಗಾಗಲೇ ಮಿಲಿಟರಿಯ ಅಮಾನುಷ ಹತ್ಯಾಕಾಂಡಕ್ಕೆ ನೂರಾರು ಜನರು ಬಲಿಯಾಗಿದ್ದಾರೆ. ಅದಕ್ಕೆ ಅಂಜಿಕೊಳ್ಳದ ಜನತೆ, ರೊಚ್ಚಿಗೆದ್ದು ಬಂಧಿತರ ಬಿಡುಗಡೆಗಾಗಿ ಜಿಯಾನನ್ನು

(8ನೇ ಪುಟ ನೋಡಿ)

ಸೆಪ್ಟೆಂಬರ್ 1 : ಶಾಂತಿಗಾಗಿ ಕಾರ್ಮಿಕ ಸಂಘಗಳ ಕಾರ್ಯಾಚರಣೆ ದಿನ

1986 ನ್ನು ಅಂತರರಾಷ್ಟ್ರೀಯ ಶಾಂತಿ ವರ್ಷವನ್ನಾಗಿ ಘೋಷಿಸಿದೆ ಸಂಯುಕ್ತ ರಾಷ್ಟ್ರ ಸಂಘ. ಈ ಘೋಷಣೆಯನ್ನು ಸ. ರಾ. ಸಂಘದ ಅಂತರ್ರಾಷ್ಟ್ರೀಯ ಯುವ ಜನ ವರ್ಷದ ಬೆನ್ನ ಹಿಂದೆ ಸಾರಲಾಗಿದೆ. ಜೀವಂತ ಉಳಿಯುವ ಹಕ್ಕಿಗಾಗಿ ಯುವಕರು ನಡೆಸುವ ದೈನಂದಿನ ಹೋರಾಟದಲ್ಲಿ ಶಾಂತಿ ಮತ್ತು ನಿಶ್ಶಸ್ತ್ರೀಕರಣ ಕೇಂದ್ರ ಬಿಂದುವಾಗಬೇಕಾಗಿದೆ. ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಗೋರ್ಬಚೇವ್ ಅವರು ಜಗತ್ತಿನಲ್ಲಿ ಉಂಟಾಗಿರುವ ಯುದ್ಧ ಭೀತಿಯನ್ನು ತೆಗೆದೊಗೆದು, ಜನತೆ ನಿಶ್ಚಿಂತೆಯಿಂದ ಜೀವಿಸುವಂತಾಗಲು, ಯುದ್ಧ ತಯಾರಿಗಾಗಿಯೂ ಯುದ್ಧದ ಅಪಾಯದಿಂದ ರಕ್ಷಣೆಗಾಗಿಯೂ ಈಗ ಖರ್ಚಾಗುತ್ತಿರುವ ಕೋಟ್ಯಾನು ಕೋಟಿ ಹಣ ಜನರ ಕಲ್ಯಾಣಕ್ಕಾಗಿ ವ್ಯಯವಾಗುವಂತೆ ಮಾಡಲು ಅಣ್ವಸ್ತ್ರ ನಿಷೇದದ ಹಲವಾರು ಸೂಚನೆಗಳನ್ನು ಮುಂದಿಟ್ಟರೂ ರೇಗನ್ ಅವುಗಳನ್ನು ತಿರಸ್ಕರಿಸಿ ಯುದ್ಧ ತಯಾರಿಯಲ್ಲಿರುವಾಗ ಶಾಂತಿಯ ಪ್ರಶ್ನೆ ಪ್ರಧಾನವಾಗಿದೆ. ಆದ್ದರಿಂದಲೇ ಸೆಪ್ಟೆಂಬರ್ ಒಂದನ್ನು ಅಂತರ್ರಾಷ್ಟ್ರೀಯ ಶಾಂತಿ ದಿನವನ್ನಾಗಿ ಆಚರಿಸಬೇಕೆಂದು ಸಿ ಜಿ ಟಿ ಕಾನ್‌ಫೆಡರಲ್ ಯುವಕ ಕೇಂದ್ರ ಕಾರ್ಮಿಕ ಸಂಘಗಳಿಗೂ, ದುಡಿಯುವ ಯುವಕರಿಗೂ ಕರೆಕೊಟ್ಟಿದೆ. ಸಿ ಐ ಟಿ ಯು ಅದನ್ನು ಬೆಂಬಲಿಸಿ ಕಾರ್ಮಿಕ ಸಂಘಗಳು ಎಲ್ಲ ಕೇಂದ್ರಗಳಲ್ಲಿಯೂ 1–9–86 ರಂದು ಸಾರ್ವಜನಿಕ ಸಭೆ, ಮೆರವಣಿಗೆಗಳ ಮೂಲಕ ಶಾಂತಿ ದಿನಾಚರಣೆಯನ್ನು ಯಶಸ್ವಿಗೊಳಿಸಬೇಕೆಂದು ಕರೆ ನೀಡಿದೆ. ಯುದ್ಧ ವಿರೋಧಿಸಿ ಶಾಂತಿಗಾಗಿ ಹೋರಾಟ ಮುಂದುವರಿಯಲಿ.

ಕರ್ನಾಟಕದ ವಿಧಾನ ಸಭೆ ಅಧಿವೇಶನ

'ವಿಧಾನ ಪರಿಷತ್ ರದ್ದಾಗಲಿ'

–ಸಿ. ಪಿ. ಐ. (ಎಂ) ಬೇಡಿಕೆ

ಕೇರಳ, ಪ. ಬಂಗಾಲಗಳಲ್ಲಿ ಸಿ. ಪಿ. ಐ. (ಎಂ) ಪಕ್ಷದ ಮುಖಂಡತ್ವದ ಸರಕಾರಗಳಿದ್ದಾಗ ಅಲ್ಲಿನ ವಿಧಾನ ಪರಿಷತ್‌ಗಳನ್ನು ರದ್ದು ಮಾಡುವ ನಿರ್ಣಯ ಕೈಗೊಳ್ಳಲಾಗಿತ್ತು. ಅನಂತರ ಇನ್ನೂ ಹಲವಾರು ರಾಜ್ಯಗಳೂ ಅಂಥದ್ದೇ ಕ್ರಮ ಕೈಕೊಂಡಿದ್ದವು. ಇತ್ತೀಚಿಗೆ ಆಂಧ್ರ ಮತ್ತು ತಮಿಳುನಾಡು ಕೂಡ ತಮ್ಮ ವಿಧಾನ ಪರಿಷತ್‌ಗಳನ್ನು ರದ್ದುಪಡಿಸಿವೆ. ಆಂಧ್ರ ವಿಧಾನಸಭೆ ಅಲ್ಲಿಯ ವಿಧಾನ ಪರಿಷತ್ತನ್ನು ರದ್ದು ಮಾಡುವ ನಿರ್ಣಯ ಕೈಗೊಂಡು ಕೇಂದ್ರಕ್ಕೆ ಕಳುಹಿಸಿದಾಗ, ಅಂದು ಪ್ರಧಾನ ಮಂತ್ರಿಯಾಗಿದ್ದ ಇಂದಿರಾಗಾಂಧಿ ಎನ್. ಟಿ. ಆರ್. ಸರಕಾರದ ನಿರ್ಣಯವನ್ನು ರಾಜಕೀಯ ದುರುದ್ದೇಶದಿಂದ ಕೂಡಿದೆಂದು ಹೇಳಿ ಲೋಕಸಭೆಯಲ್ಲಿ ಮಂಡಿಸಲು ತಡ ಮಾಡಿದ್ದರು. ಈಗ ದೇಶದಲ್ಲಿ ಕರ್ನಾಟಕ, ಬಿಹಾರ, ಮಧ್ಯಪ್ರದೇಶ, ಮಹಾರಾಷ್ಟ್ರ, ಜಮ್ಮು–ಕಾಶ್ಮೀರ ಮತ್ತು ಉತ್ತರ ಪ್ರದೇಶಗಳಲ್ಲಿ ಮಾತ್ರ ವಿಧಾನ ಪರಿಷತ್‌ಗಳು ಇನ್ನೂ ರದ್ದಾಗದೆ ಉಳಿದಿವೆ.

ಕರ್ನಾಟಕದಲ್ಲಿಯೂ ವಿಧಾನ ಪರಿಷತ್ತನ್ನು ರದ್ದುಪಡಿಸಬೇಕೆಂದು ಸಿ ಪಿ. ಐ. (ಎಂ) ಶಾಸಕರಾದ ಆರ್. ವೆಂಕಟರಾಮಯ್ಯನವರು ಒಂದು ಖಾಸಗಿ ನಿರ್ಣಯವನ್ನು ಮಂಡಿಸಿದ್ದರು. ಅದನ್ನು ಚರ್ಚೆಗೆ ತೆಗೆದುಕೊಳ್ಳದೆ ಹೆಗ್ಗಡೆ ಸರಕಾರ ಈಗಿರುವ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು 63ರಿಂದ 75ಕ್ಕೆ ಹೆಚ್ಚಿಸುವ ನಿರ್ಣಯವನ್ನು ವಿಧಾನ ಸಭೆಯಲ್ಲಿ ಮಂಡಿಸಿ ವಿರೋಧ. ಪಕ್ಷಗಳ ಪ್ರತಿರೋಧ ಗಮನಿಸದೆ ಪಾಸು ಮಾಡಿ ಕೇಂದ್ರಕ್ಕೆ ಶಿಫಾರಸು ಮಾಡಿದೆ. ಸಿ.ಪಿ.ಐ. (ಎಂ) ಶಾಸಕರಾದ ವೆಂಕಟರ್‍ಯಾಮಯ್ಯನವರು ಆ ನಿರ್ಣಯವನ್ನು ವಿರೋಧಿಸುತ್ತ, ನಿರುಪಯುಕ್ತವಾದ, ಅಸಮಾಧಾನಗೊಂಡ ರಾಜಕಾರಣಿಗಳಿಗಷ್ಟೇ ಅಧಿಕಾರಸ್ಥಾನ ನೀಡುವ, ಜನರ ಸಮಸ್ಯೆಗಳ ಪರಿಹಾರದಲ್ಲಿ ನೇರವಾದ ಜವಾಬ್ದಾರಿ ಇಲ್ಲದ ವಿಧಾನ ಪರಿಷತ್ತನ್ನು ರದ್ದುಗೊಳಿಸಬೇಕೆಂದೂ ಪರಿಷತ್ತಿನ ಸದಸ್ಯರ ಸಂಖ್ಯೆ ಹೆಚ್ಚಿಸಿ ಅವರಿಗಾಗಿ ರೂ 20 ಲಕ್ಷ ಪ್ರತಿವರ್ಷ ಖರ್ಚುಮಾಡುವ ಬದಲಾಗಿ ಆ ಹಣವನ್ನು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಬಹುದೆಂದು ಹೇಳಿದರು.

ಕಳೆದ 3 ವರ್ಷ ಮೌನತಾಳಿ ಈಗ ಪರಿಷತ್ತಿನಲ್ಲಿ ತನಗೆ ಬಹುಮತ ದೊರೆತಾಕ್ಷಣ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಜನತಾ ಸರಕಾರದ ನಿರ್ಣಯ ರಾಜಕೀಯ ದುರುದ್ದೇಶದಿಂದಲೇ ಕೂಡಿದೆಂಬುದು ಸ್ಪಷ್ಟ. ಸಾಹಿತ್ಯ, ಕಲೆ, ಶಿಕ್ಷಣ ಕ್ಷೇತ್ರಗಳಲ್ಲಿ ಪ್ರತಿಭಾವಂತರಿಗೆ ತಮ್ಮ ಸಮಸ್ಯೆಗಳನ್ನು ಮಂಡಿಸಲು ವಿಧಾನ ಪರಿಷತ್ತಿನಲ್ಲಿ ಪ್ರಾತಿನಿಧ್ಯ ಕೊಡುವ ಉದ್ದೇಶದಿಂದ ಅದರ ಸಂಖ್ಯೆ ಹೆಚ್ಚಿಸಲಾಗಿದೆಯೆಂಬ ಮಂತ್ರಿ ಲಕ್ಷ್ಮೀಸಾಗರ ಅವರ ಹೇಳಿಕೆ ಸಮಂಜಸವೆನಿಸುವುದಿಲ್ಲ. ಈಗಿರುವ ಒಬ್ಬಿಬ್ಬ ಪ್ರತಿನಿಧಿಗಳು ತಮ್ಮ ಕ್ಷೇತ್ರದ ಜನರ ಸಮಸ್ಯೆಗಳನ್ನು ಮಂಡಿಸಿದಾಗ ಸರಕಾರ ಅವುಗಳನ್ನು ಬಗೆಹರಿಸುತ್ತಿಲ್ಲ, ಸಂಬಂಧಪಟ್ಟವರು ಮುಷ್ಕರ, ಮತ ಪ್ರದರ್ಶನಗಳನ್ನು ನಡೆಸಬೇಕಾಗುತ್ತಿದೆ, ಇನ್ನೂ ಒಬ್ಬಿಬ್ಬರನ್ನು ನಾಮಕರಣ ಮಾಡಿದ್ದರೂ ಏನೂ ಪ್ರಯೋಜನವಾಗಲಾರದು. ಪ್ರತಿಷ್ಠಿತ ವ್ಯಕ್ತಿಗಳು ಹೊರಗಿದ್ದೇ ಸಮಸ್ಯೆಗಳಿಗೆ ಪ್ರತಿಕ್ರಿಯೆ ವ್ಯಕ್ತ ಮಾಡುತ್ತಾರೆ. ಪರಿಷತ್ತಿನ ಸದಸ್ಯರಾಗಿದ್ದು ಸಾಧಿಸುವುದೇನಿಲ್ಲೆಂದು ತಿಳಿದೇ ಪರಿಷತ್ತಿನ ರದ್ದತಿಗೆ ಅಂಥವರೆಲ್ಲ ಬೆಂಬಲ ತೋರಿಸುತ್ತಿದ್ದಾರೆ.

ವಿಧಾನ ಪರಿಷತ್ತನ್ನು ರದ್ದುಪಡಿಸುವ ಪ್ರಶ್ನೆಯೇ ಇಲ್ಲೆಂದು ಹೆಗ್ಗಡೆಯವರು ಹೇಳಿರುವುದು ಜನತಾ ಪಕ್ಷದ ರಾಜಕೀಯ ಉದ್ದೇಶವನ್ನು ಪ್ರತಿಬಿಂಬಿಸುತ್ತದೆ.

ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ ಏರಿಸಿರುವುದನ್ನು ಸಿ. ಪಿ. ಐ. (ಎಂ) ವಿರೋಧಿಸುತ್ತದೆ. ಪರಿಷತ್ತನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತದೆ.

—ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

ನಾಲ್ಕನೇ ವೇತನ ಆಯೋಗದ ವರದಿ : ಪರ್ವತ ಪ್ರಸವ

ಬಹು ಕಾಲದಿಂದ ಅತ್ಯಂತ ನಿರೀಕ್ಷೆಯಲ್ಲಿದ್ದ ಸುಮಾರು 52 ಲಕ್ಷ ಕೇಂದ್ರ ಸರಕಾರದ ನೌಕರರ ವೇತನ ಪರಿಷ್ಕರಣ ಕುರಿತು ನಾಲ್ಕನೇ ಆಯೋಗದ ವರದಿ ಕೊನೆಗೂ ದಿನಾಂಕ 30-6-86 ರಂದು ಪ್ರಕಟವಾಯಿತು. ಐದು ಜನ ವೃದ್ಧ ಸದಸ್ಯರ ಈ ಆಯೋಗವು ಕಳೆದ ಮೂರು ವರ್ಷಗಳಲ್ಲಿ 8500 ಮನವಿಗಳನ್ನು ಸ್ವೀಕರಿಸಿ, 206 ಸಭೆಗಳನ್ನು ನಡೆಸಿ 711 ಪುಟಗಳ ಬೃಹತ್ ವರದಿಯನ್ನು ಕೇಂದ್ರ ಅರ್ಥಮಂತ್ರಿ ವಿ.ಪಿ. ಸಿಂಗ್ ಅವರಿಗೆ ಒಪ್ಪಿಸಿ ಕೈತೊಳೆದುಕೊಂಡಿತು. ಈ ಆಯೋಗದ ಸಾಧನೆ ಏನು ? ಕೇಂದ್ರ ಸರಕಾರದ ಅತ್ಯಂತ ಕೆಳಮಟ್ಟದ ನೌಕರನಿಗೆ ತಿಂಗಳಿಗೆ ಕನಿಷ್ಠ ರೂ 50 ರಷ್ಟು, ಸ್ಥಿರ ಬೆಲೆಗಳಲ್ಲಿ ರೂ 10ಕ್ಕೂ ಕಡಿಮೆಯಷ್ಟು ವೇತನ ಹೆಚ್ಚಳಕ್ಕೆ ಸಲಹೆ ಮಾಡಿರುವುದು ! ಇದು ಹದಿಮೂರು ವರ್ಷಗಳ ನಂತರ ಪಡೆಯಲಿರುವ ವೇತನ ಪರಿಷ್ಕರಣ (ಮೂರನೇ ವೇತನ ಆಯೋಗ 1970-73), ಇದು ಪ್ರಾಯಶಃ ಈ ಶತಮಾನದ ಅಂತ್ಯದವರೆಗೂ ಮುಂದುವರಿಯಲಿರುವುದು. ನಾಲ್ಕನೇ ವೇತನ ಆಯೋಗದ ವರದಿಯ ಸಾಧನೆ ಒಂದು ಪರ್ವತ ಪ್ರಸವವೇಸರಿ. ಪರ್ವತ ಸಣ್ಣ ಮಣ್ಣು ಕುಪ್ಪೆ ಹೆತ್ತಂತೆ !

ವೇತನ ಆಯೋಗದ ವರದಿಯು ಪ್ರಕಟವಾಗುತ್ತಿದ್ದಂತೆಯೇ, ಕೇಂದ್ರ ಸರಕಾರದ ಮಂತ್ರಿಗಳೂ, ಅಧಿಕಾರಿಗಳೂ, ಅರ್ಥಶಾಸ್ತ್ರಜ್ಞರೂ, ರೇಡಿಯೋ, ಟಿ.ವಿ. ಯಂತಹ ಸಾಮೂಹಿಕ ಮಾಧ್ಯಮಗಳ ಮೂಲಕ ವರದಿಯ ಸಲಹೆಗಳ ಗುಣಗಾನ ಮಾಡತೊಡಗಿದರು. ನೌಕರರು ಬಹಳ ತೃಪ್ತರಾದರು ಎಂದು ನಂಬಿಸಲು ಪ್ರಯತ್ನಿಸಿದರು. ಬಂಡವಾಳಶಾಹಿ ಪತ್ರಿಕೆಗಳೂ ಈ ಸುಸಜ್ಜಿತ ಪ್ರಚಾರದಲ್ಲಿ ತಮ್ಮ ಸ್ವರ ಕೂಡಿಸಿದವು. ಕೆಲವು ರಾಜ್ಯ ಸರಕಾರಗಳು ತಮ್ಮ 60 ಲಕ್ಷ ನೌಕರರಿಗೂ ವೇತನ ಪರಿಷ್ಕರಿಸಲು ಹೆಚ್ಚಿನ ಭಾರ ಹೊರಬೇಕಾಗುವುದೆಂದು ಆತಂಕ ವ್ಯಕ್ತಪಡಿಸಿದವು. ಆದರೆ ನಿಜಸ್ಥಿತಿ ಏನು ?

ವೇತನ ಆಯೋಗದ ವರದಿಯ ವಿವರಗಳು ಸ್ವಲ್ಪ ಸ್ವಲ್ಪವಾಗಿ ತಿಳಿಯುತ್ತಾ ಬಂದಂತೆ, ಅವುಗಳ ಪರಿಣಾಮಗಳನ್ನು ಕೂಲಂಕುಶವಾಗಿ ಪರಿಶೀಲಿಸುತ್ತಿದ್ದಂತೆ ನೌಕರರು ತಮ್ಮ ವೇತನದಲ್ಲಿ ನಿವ್ವಳ ಹೆಚ್ಚಳದ ಲೆಕ್ಕಹಾಕಿ ತಾಳೆ ನೋಡಲಾರಂಭಿಸಿದಂತೆ. ಆಯೋಗದ ವರದಿಯ ಅವೈಜ್ಞಾನಿಕತೆ, ಅಸಮರ್ಪಕತೆ, ತಾತ್ಕಾಲಿಕತೆ, ಒಂದೊಂದಾಗಿ ಬೆಳಕಿಗೆ ಬರಲಾರಂಭಿಸಿದವು. ನೌಕರರು ಸಾರ್ವತ್ರಿಕವಾಗಿ ತಮ್ಮ ಅಸಮಧಾನವನ್ನು, ಅತೃಪ್ತಿಯನ್ನು ಪ್ರಕಟಿಸಲಾರಂಭಿಸಿದರು. ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ವರದಿಯ ವಿರುದ್ಧ ತೀವ್ರ ಪ್ರತಿಭಟನೆಗಳಾದವು. ಕೇಂದ್ರ ಕಾರ್ಮಿಕ ಸಂಘಗಳೂ, ಕೇಂದ್ರ ಸರಕಾರದ ನೌಕರರ ಸಂಘಗಳೂ, ರಾಜ್ಯ ಸರಕಾರಗಳ ನೌಕರರ ಸಂಘಗಳೂ, ಇತರ ಅನೇಕ ಅಖಿಲ ಭಾರತ ನೌಕರರ ಹಾಗೂ ಕಾರ್ಮಿಕ ಸಂಘಗಳೂ ನಾಲ್ಕನೇ ವೇತನ ಆಯೋಗದ ವರದಿಯನ್ನು ತೀವ್ರವಾಗಿ ಖಂಡಿಸಿ, ಹೋರಾಟಕ್ಕೆ ಕರೆಕೊಟ್ಟವೆ.

ವೇತನದಲ್ಲಿ ಸರಿ ಸಮಾನತೆ ಇಲ್ಲ

'ಸಮಾನ ಕೆಲಸಕ್ಕೆ ಸಮಾನವೇತನ" ಕೇಂದ್ರ ಸರಕಾರಿ ನೌಕರರ ಒಂದು ಪ್ರಮುಖ ಬೇಡಿಕೆಯಾಗಿತ್ತು. ಆ ಆಧಾರದಲ್ಲಿ ಅವರ ವೇತನಮಟ್ಟ ಕನಿಷ್ಠ ಸಾರ್ವಜನಿಕ ಸಂಸ್ಥೆಗಳ ನೌಕರರಷ್ಟಾದರೂ ಇರಬೇಕೆಂದು ಅವರ ನ್ಯಾಯ ಬೇಡಿಕೆ. ಕೇಂದ್ರ ಸರಕಾರಿ ನೌಕರರ ವೇತನ ಪರಿಷ್ಕರಣ ಮಾಡುವಾಗ ಜೀವವಿಮಾನಿಗಮ ಮತ್ತು ಬ್ಯಾಂಕುಗಳಲ್ಲಿರುವ ನೌಕರರ ವಿವಿಧ ದರ್ಜೆಗಳ ವೇತನಗಳನ್ನು ಉಪಯುಕ್ತವಾಗಿ ಗಮನದಲ್ಲಿರಿಸಿಕೊಳ್ಳಬೇಕೆಂದು ಎರಡನೇ ವೇತನದ ಆಯೋಗ (1957-59) ಅಭಿಪ್ರಾಯಪಟ್ಟಿತ್ತು, "ಸಮಾನ ಕೆಲಸಕ್ಕೆ ಸಮಾನ ವೇತನ" ತತ್ವವನ್ನು ಅಂಗೀಕರಿಸಿತ್ತು. ಇದನ್ನು ಮೂರನೇ ವೇತನ ಆಯೋಗವೂ (1970-73) ನಿರಾಕರಿಸಲಿಲ್ಲ. ಆದರೆ, ಈ ತತ್ವವನ್ನು ಅನುಷ್ಠಾನಗೊಳಿಸಲು ಸೂಚಿಸಿದವಿಧಾನ ಮಾತ್ರತಿರುವು ಮರುವು. ಸಾರ್ವಜನಿಕ ಸಂಸ್ಥೆಗಳ ನೌಕರರ ವೇತನವನ್ನೇ ಕೇಂದ್ರ ಸರಕಾರದ ನೌಕರರ ವೇತನ ಮಟ್ಟಕ್ಕೆ ಇಳಿಸುವುದು.

ಆದರೆ, ನಾಲ್ಕನೇ ವೇತನ ಆಯೋಗದ (1983-86) ಕೇಂದ್ರ ಸರಕಾರದ ಮತ್ತು ಸಾರ್ವಜನಿಕ ಸಂಸ್ಥೆಗಳ ನೌಕರರೊಳಗಿನ ವೇತನಗಳಲ್ಲಿ ವ್ಯತ್ಯಾಸಗಳಿರುವುದನ್ನು ಒಪ್ಪಿದರೂ, ಈ ಎರಡೂ ಕ್ಷೇತ್ರಗಳಲ್ಲಿ ವೇತನ ಸರಿಸಮಾನತೆ ಅಸಾಧ್ಯ ಎಂದೂ ಸ್ಪಷ್ಟಪಡಿಸಿದೆ. ಕಳೆದ 12 ವರ್ಷಗಳಿಂದ ಕೇಂದ್ರ ಸರಕಾರದ ನೌಕರರು, ರೈಲ್ವೆ ಅಂಚೆ-ತಂತಿ ನೌಕರರು ಸತತವಾಗಿ "ಸಮಾನ ಕೆಲಸಕ್ಕೆ ಸಮಾನ ವೇತನ" ಸಿಗಬೇಕೆಂದು ಹೋರಾಡುತ್ತಲೇ ಬಂದಿದ್ದಾರೆ. ನಾಲ್ಕನೇ ವೇತನ ಆಯೋಗ ಈ ಮೂಲಭೂತ ಬೇಡಿಕೆಯನ್ನೇ ತಳ್ಳಿಹಾಕಿದೆ. ಭಾರತದ ಸಂವಿಧಾನಕ್ಕೇ ಅವಮಾನ ಮಾಡಿದೆ.

ಜೀವನಾವಶ್ಯಕ ಕನಿಷ್ಠ ವೇತನ ಇಲ್ಲ :

1950ರಲ್ಲಿಯೇ ರೂಪುಗೊಂಡ ಭಾರತದ ಸಂವಿಧಾನದಲ್ಲಿ "ಸಮಾನ ಕೆಲಸಕ್ಕೆ ಸಮಾನ ವೇತನ"ದ ತತ್ವ ನಿರ್ದೇಶನದೊಂದಿಗೇ, "ಜೀವನಾವಶ್ಯಕ ವೇತನ"ದ (living wage) ತತ್ವ ನಿರ್ದೇಶನವೂ ಸೇರಿಸಲ್ಪಟ್ಟಿದೆ. ಆದರೆ, ಅಂತಹ ಉನ್ನತ ಮಟ್ಟದ, ಆದರ್ಶ ವೇತನ ಪಡೆಯಲು ದೀರ್ಘಕಾಲದ ಆರ್ಥಿಕ ಅಭಿವೃದ್ಧಿ ಅಗತ್ಯ ಎಂದು ಪರಿಗಣಿಸಿ, ಸದ್ಯಕ್ಕೆ "ಜೀವನಾವಶ್ಯಕ ಕನಿಷ್ಠ ವೇತನ"(need based minimum wage) ವನ್ನಾದರೂ ಎಲ್ಲಾ ವರ್ಗದ ನೌಕರರಿಗೆ ಕಾರ್ಮಿಕರಿಗೆ ನೀಡಬೇಕೆಂದು 1957ರ 15ನೇ ಅಖಿಲ ಭಾರತ ಕಾರ್ಮಿಕ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು. ಮುಂದಿನ ಎಲ್ಲಾ ವೇತನ ಪರಿಷ್ಕರಣಗಳಿಗ ಖಾಸಗಿ, ಸಾರ್ವಜನಿಕ, ಸರಕಾರಿ ಕ್ಷೇತ್ರಗಳಲ್ಲಿ "ಜೀವನಾವ್ಯಕ ಕನಿಷ್ಠ ವೇತನ"ವೇ ಮಾರ್ಗದರ್ಶಿ ಆಯಿತು. ಸಹಜವಾಗಿಯೇ, ಕೇಂದ್ರ-ರಾಜ್ಯ ಸರಕಾರಿ ನೌಕರರೂ ತಮ್ಮ ವೇತನಗಳನ್ನು ಈ ಆಧಾರದಲ್ಲಿಯೇ ಪುನಃ ಪರಿಷ್ಕರಿಸಬೇಕೆಂದು ಒತ್ತಾಯಿಸುತ್ತಾ ಬಂದರು, ಹಲವಾರು ಹೋರಾಟಗಳನ್ನು ನಡೆಸಿದರು. ಜೀವನಾವಶ್ಯಕ ವಸ್ತುಗಳ ಬೆಲೆಗಳು ಕಳೆದ ಮೂವತ್ತು ವರ್ಷಗಳಲ್ಲಿ ಆರೇಳು ಪಾಲು ಹೆಚ್ಚಾಗಿವೆ. ಆದರೆ, ನಾಲ್ಕನೇ ವೇತನ ಆಯೋಗ ಕೇಂದ್ರ ಸರಕಾರದ ನೌಕರರ ವೇತನ ಪರಿಷ್ಕರಣವನ್ನು "ಜೀವನಾವಶ್ಯಕ ಕನಿಷ್ಠ ವೇತನ" ತತ್ವಕ್ಕಿಂತಲೂ ಸರಕಾರದ "ವೇತನ ಕೊಡುವ ಸಾಮರ್ಥ್ಯ"ವನ್ನೇ ಹೆಚ್ಚಾಗಿ ಗಮನದಲ್ಲಿಟ್ಟುಕೊಂಡಿದೆ. ಸಂಪನ್ಮೂಲದ ಕೊರತೆಯ ನೆಪವೊಡ್ಡಿ ಕೇಂದ್ರ ಸರಕಾರಿ ನೌಕರರ ಮೂಲ ವೇತನವನ್ನು ರೂ 950ರ ಬದಲು ರೂ 750ಕ್ಕೆ ಮೊಟಕುಗೊಳಿಸಿದೆ.

'ಆದರ್ಶ' ಅಲ್ಲ, 'ಒಳ್ಳೆಯ' ಯಜಮಾನ

ನೆಹರೂ ಕಾಲದಿಂದಲೂ ಸರಕಾರ ಆದರ್ಶ ಯಜಮಾನನಂತಿರಬೇಕು ಎಂಬ ಘೋಷಣೆ ಚಲಾವಣೆಯಲ್ಲಿತ್ತು. ಆದರೆ, ಆಚರಣೆಯಲ್ಲಿ, ನೌಕರರ ಸಂಬಳ ಸೌಲತ್ತುಗಳನ್ನು ಗಮನಿಸಿದರೆ ಮುಖ್ಯವಾಗಿ ಸಂಘಟಿತ ಕ್ಷೇತ್ರದಲ್ಲಿ ಪ್ರಥಮಸ್ಥಾನ ಖಾಸಗೀ ಸಂಸ್ಥೆಗಳಿಗೆ, ಎರಡನೇ ಸ್ಥಾನ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಿಗೆ, ಮೂರನೇ ಸ್ಥಾನ ಸರಕಾರಿ ಖಾತೆಗಳಿಗೆ ! ನಾಲ್ಕನೇ ವೇತನ ಆಯೋಗ ಈ ಘೋಷಣೆಯನ್ನೂ ಬಿಟ್ಟು ಬಿಟ್ಟು, ಸರಕಾರ 'ಒಳ್ಳೆಯ' ಯಜಮಾನನಂತಿದ್ದರೆ ಸಾಕು ಎಂದು ತೀರ್ಪು ಕೊಟ್ಟಿದೆ ! ಅಂದರೆ, ನೌಕರರ ಸಂಬಳ ಖಾಸಗೀ ಮತ್ತು ಸಾರ್ವಜನಿಕ ಕ್ಷೇತ್ರಗಳಿಗಿಂತ ಕಡಿಮೆ ಮಟ್ಟದಲ್ಲಿಯೇ ಇದ್ದು ಅವರಿಗೆ ಮನೆ ಬಾಡಿಗೆ ಭತ್ತೆ, ಶಿಕ್ಷಣ, ಆರೋಗ್ಯ, ಭತ್ತೆ, ಸಾರಿಗೆ ಸೌಕರ್ಯ, ಇತ್ಯಾದಿ ಕೆಲವು ಅಲ್ಪಸ್ವಲ್ಪ ಸವಲತ್ತುಗಳನ್ನು ಒದಗಿಸಿ ಕೊಡುವುದು. ಈ ಭತ್ತೆಗಳಾಗಲೀ, ಸವಲತ್ತುಗಳಾಗಲೀ ನೌಕರರ ನಿಜವಾದ ಅವಶ್ಯಕತೆಗಳನ್ನು ಪೂರೈಸಲಾರವು. ಮೆಡಿಕಲ್ ಭತ್ತೆ ತಿಂಗಳಿಗೆ ಕೇವಲ ರೂ 25ರಂತಿದ್ದು, ನಿಜವಾದ ಅಗತ್ಯತೆಗಿಂತ ಬಹಳ ಕಡಿಮೆಯಾಗಿದೆ. ಜೀವನಾವಶ್ಯಕ ಕನಿಷ್ಠ ವೇತನ ಎಲ್ಲಾ ಸರಕಾರಿ ನೌಕರರಿಗ ಸಿಗುವವರೆಗೆ ವಾರ್ಷಿಕ ಸಂಬಳದ ಶೇ8 1/3ರ ದರದಲ್ಲಿ ಬೋನಸ್ ಬದಲಿಗೆ ಉದಾರವಾಗಿ ಕೊಡಬೇಕೆಂಬ ಬೇಡಿಕೆಯನ್ನೂ ವೇತನ ಆಯೋಗ ತಳ್ಳಿ ಹಾಕಿದೆ. ಜನತಾ ಸರಕಾರದ ಕಾಲದಲ್ಲಿ ಆರಂಭವಾದ ರೈಲ್ವೆ,ಅಂಚೆ,ತಂತಿ, ರಕ್ಷಣಾ ಉತ್ಪಾದನೆ ಮುಂತಾದ ಕೆಲವು ಇಲಾಖೆಗಳ ನೌಕರರಿಗೆ ಉತ್ಪಾದಕತೆಗೆ ಸಂಬಂಧಿಸಿದ ಬೋನಸ್ ಕೊಡುವುದನ್ನೂ ಪುನರಾಲೋಚಿಸಬೇಕೆಂದು ಆಯೋಗ ಸಲಹೆ ಮಾಡಿದೆ !

ಭಾರೀ ನೆಚ್ಚದ ದೊಡ್ಡ ಸಂಬಳ ?

ವೇತನ ಆಯೋಗದ ವರದಿ ಪ್ರಕಟವಾಗುತ್ತಿದ್ದಂತೆಯೇ, 52 ಲಕ್ಷ ಕೇಂದ್ರ ಸರಕಾರಿ ನೌಕರರಿಗೆ ಭಾರೀ ನೆಚ್ಚದ ದೊಡ್ಡ ಸಂಬಳ ಸಿಗುವುದೆಂಬ ಪ್ರಚಾರ ಪ್ರಾರಂಭವಾಯಿತು. ವಾಸ್ತವವಾಗಿ, ಗ್ರಾಹಕರ ಬೆಲೆಸೂಚಿ (1960—100) 600ಕ್ಕೆ ಸಂಬಂಧಿಸಿ ಕನಿಷ್ಠ ಮೂಲ ವೇತನ ರೂ 950 ನಿಗದಿ ಮಾಡಬೇಕೆಂದು ನೌಕರರ ಬೇಡಿಕೆ ಇದ್ದರೂ ಆಯೋಗ ಬೆಲೆ ಸೂಚಿ608ಕ್ಕೆ ರೂ 750ರಷ್ಟೇ ಮೂಲ ವೇತನ ನಿಗದಿಗೊಳಿಸಿದೆ. ಅತ್ಯಂತ ಕೆಳಮಟ್ಟದ ನೌಕರರಿಗೆ ಮಾಸಿಕ ರೂ 50ರಷ್ಟೇ ವೇತನ ಹೆಚ್ಚಳವಾಗುವುದಾದರೆ, ಅತ್ಯುನ್ನತ ಸರಕಾರಿ ಅಧಿಕಾರಿಗೆ ರೂ, 9000ರಷ್ಟು ಮೂಲ ವೇತನ ನಿಗದಿ ಮಾಡಲಾಗಿದ್ದು, ರೂ 900ಕ್ಕಿಂತಲೂ ಹೆಚ್ಚು ಮಾಸಿಕ ವೇತನ ಹೆಚ್ಚಳಕ್ಕೆ ಸಲಹೆ ಮಾಡಲಾಗಿದೆ ಅಂದರೆ, ಕೆಳಮಟ್ಟದಲ್ಲಿ ಕೇಂದ್ರ ಸರಕಾರಿ ನೌಕರರ ವೇತನವು ಸಾರ್ವಜನಿಕ ಹಾಗೂ ಖಾಸಗೀ ಸಂಸ್ಥೆಗಳ ನೌಕರರಿಗಿಂತ ಕಡಿಮೆ ಆಗಿದ್ದರೂ, ಮೇಲ್ಮಟ್ಟದಲ್ಲಿ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಅವರ ವೇತನವು ಸಾರ್ವಜನಿಕ ಸಂಸ್ಥೆಗಳ

(7 ನೇ ಪುಟ ನೋಡಿ)

ಕೇಂದ್ರ ಸರಕಾರದ ನೌಕರರಿಗೆ ವಸಾಹತು ಕಾಲದ ವೇತನದ ಪದ್ಧತಿಯನ್ನು ಸಿ.ಐ.ಟಿ.ಯು ವಿರೋಧಿಸುತ್ತದೆ.

—ಕಾಂ. ಬಿ. ಟಿ. ರಣದಿವೆ

ಕೇಂದ್ರ ಸರಕಾರಿ ನೌಕರನ ಕನಿಷ್ಟ ವೇತನ ಬಡತನ ರೇಖೆಗಿಂತ ಹೆಚ್ಚೇನು ಮೇಲಿಲ್ಲ,

—ಪ್ರೊ. ಬಿ. ಬಿ. ಭಟ್ಟಾಚಾರ್ಯ,
ಪ್ರಸಿದ್ಧ ಅರ್ಥಶಾಸ್ತ್ರಜ್ಞರು

ರೂ. 750 ದೊಡ್ಡ ಸಂಬಳವೆಂದರೆ ಶಬ್ದಕೋಶದಲ್ಲಿ ಈ ಶಬ್ದಾರ್ಥವನ್ನು ಪುನಃ ಬರೆಯಬೇಕಾದೀತು.

--ರಂಗರಾಜನ್ ಕುಮಾರ ಮಂಗಲಂ,
ಕೇಂದ್ರ ಸರ್ಕಾರಿ ನೌಕರರ ಮತ್ತು ಕಾರ್ಮಿಕರ ಮಹಾಸಂಘದ ಅಧ್ಯಕ್ಷ

"ಹಿಂದುಸ್ಥಾನ್ ಲಿವರ್" ಬಹುರಾಷ್ಟ್ರೀಯ ಸಂಸ್ಥೆಯ ವಾರ್ಷಿಕ ವರದಿಯಲ್ಲಿ ತನ್ನ ಸಂಸ್ಥೆಯಲ್ಲಿ ವಾರ್ಷಿಕ ರೂ 36000/-ಕ್ಕೂ ಹೆಚ್ಚಿನ ವೇತನ ಪಡೆಯುವ ನೌಕರರ ಹೆಸರುಗಳು ಸಣ್ಣ ಅಕ್ಷರಗಳ 43 ಪುಟಗಳು ಇವೆ.

--ಇಂಡಿಯಾ ಟುಡೇ

31-3-86

‘ರಾಷ್ಟ್ರೀಯ ಸಮಗ್ರತಾ ವಾರಾಚರಣೆ’

ಬೆಂಗಳೂರು

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿ ಕರೆಯಂತೆ ಆಗಸ್ಟ್ 9 ರಿಂದ 15ರ ವರೆವಿಗೆ ಕರ್ನಾಟಕ ರಾಜ್ಯಾದ್ಯಂತ “ರಾಷ್ಟ್ರೀಯ ಸಮಗ್ರತಾ ವಾರಾಚರಣೆ” ನಡೆಸಲು ನೀಡಿದ ಕರೆಯಂತೆ ಆಗಸ್ಟ್ 15 ರಂದು ಬೆಂಗಳೂರು ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಹೊರಟ ಬೃಹತ್ ಮೆರವಣಿಗೆ ಶೇಷಾದ್ರಿಪುರದ ನೆಹರು ಪಾರ್ಕ್ ತಲುಪಿತು. ಬಹಿರಂಗಸಭೆಯನ್ನು ಪಕ್ಷದ ಜಿಲ್ಲಾ ಸಮಿತಿ ಆಶ್ರಯದಲ್ಲಿ ಏರ್ಪಡಿಸಲಾಗಿತ್ತು. ಸಭೆಯ ಪ್ರಾರಂಭದಲ್ಲಿ ಕಾ॥ ನಾರಾಯಣರಾವ್ ಬಾನೂರವರು ಸ್ವಾಗತಿಸಿದರು. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿಯವರಾದ ಕಾಂ. ಎಸ್. ಸೂರ್ಯನಾರಾಯಣ ರಾವ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಕಾ॥ ಟಿ. ಎಸ್. ಅನಂತರಾಮ್, ಎಸ್. ಆರ್. ಆರಾಧ್ಯ, ಆರ್. ಶ್ರೀನಿವಾಸ್‌ರವರುಗಳು ಭಾರತ ಬ್ರಿಟೀಷರಿಂದ ಸ್ವಾತಂತ್ರ್ಯ ಗಳಿಸಿದ ನಂತರ ದೇಶವನ್ನಾಳಿದ ಕಾಂಗ್ರೆಸ್ ಆಡಳಿತ ಜನತೆಯ ಆಸೆ ಆಕಾಂಕ್ಷೆಗಳನ್ನು ಕಡೆಗಣಿಸಿ ಅನಕ್ಷರತೆ, ಬಡತನ, ನಿರುದ್ಯೋಗವನ್ನು ಸೃಷ್ಟಿಸಿದೆ. ಜನರನ್ನು ಮತೀಯ - ಜಾತಿ – ಭಾಷೆಗಳ ಆಧಾರದಲ್ಲಿ ಒಡಕುಂಟು ಮಾಡಿ ಅಸ್ಸಾಂ, ಪಂಜಾಬ್, ಗುಜರಾತ್‌ಗಳಲ್ಲಿ ದೇಶವನ್ನು ಒಡೆಯುವ ಪ್ರತ್ಯೇಕತಾವಾದಿ ಚಳವಳಿಗಳಿಗೆ ಅಮೇರಿಕನ್ ಸಾಮ್ರಾಜ್ಯಶಾಹಿ ಬೆಂಬಲಿಸುತ್ತಿದೆ ಎಂದು ಟೀಕಿಸಿದರು.

ಕೋಮುವಾದಿ - ಮತೀಯವಾದಿಗಳೊಂದಿಗೆ ಕಾಂಗ್ರೆಸ್ (ಐ) ದೇಶದ ಹಲವಾರು ಕಡೆ ಶಾಮೀಲಾಗಿ ಚುನಾವಣೆಯಲ್ಲಿ ಮತಗಳಿಸುವ ಸಂದರ್ಭ ಸಾಧಕತನದಿಂದ ಕೂಡಿದೆ ಎಂದು ಆರೋಪಿಸಿದರು. ದೇಶದ ಸ್ವಾತಂತ್ರ್ಯ, ರಾಷ್ಟ್ರೀಯ ಐಕ್ಯತೆ – ಸಮಗ್ರತೆಯನ್ನು ದೇಶ ಪ್ರೇಮಿ ಜನತೆ ಎತ್ತಿ ಹಿಡಿದು ಕಾಪಾಡಬೇಕೆಂದು ಕರೆ ನೀಡಿದರು.

ಉಡುಪಿ

ಉಡುಪಿ ತಾಲ್ಲೂಕಿನ ಪೆರ್ಡೂರಿನಲ್ಲಿ ಆಗಸ್ಟ್ 15 ರಂದು ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಸಿ. ಪಿ. ಐ. (ಎಂ) ಉಡುಪಿ ತಾಲೂಕು ಸಮಿತಿ ಕಾರ್ಯದರ್ಶಿ ಕಾ. ದೇವಿಡ್ ಕರ್ಕಡ ಮಾತನಾಡಿ ವಿಭಜಕ ಶಕ್ತಿಗಳನ್ನು ಮೆಟ್ಟಿ ನಿಂತು ಕಾರ್ಮಿಕ ವರ್ಗ ದೇಶದ ಸಮಗ್ರತೆಗಾಗಿ ಹೋರಾಟ ನಡೆಸಬೇಕಾಗಿದೆಯೆಂದು ತಿಳಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾ. ನಾರಾಯಣ ಶೆಟ್ಟಿಗಾರ್ ವಹಿಸಿದ್ದರು. ಪ್ರಾರಂಭದಲ್ಲಿ ಕಾ. ಸಾಧು ಅಮೀನರು ಸ್ವಾಗತಿಸಿ ಕೊನೆಯಲ್ಲಿ ಕಾ. ರಾಬರ್ಟ್ ಡಿಸೋಜ ವಂದನಾರ್ಪಣೆ ಮಾಡಿದರೆಂದು ವರದಿ ತಿಳಿಸಿದೆ.

ಕಾಪು

ಉಡುಪಿ ತಾಲ್ಲೂಕಿನ ಕಾಪು ಪೇಟೆಯಲ್ಲಿ ಆಗಸ್ಟ್ 12 ರಂದು ನಡೆದ ಸಾರ್ವಜನಿಕ ಸಭೆಯಲ್ಲಿ ಸಿ.ಪಿ ಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ. ಆರ್. ಶ್ರೀಯಾನ್ ಅವರು ಮಾತನಾಡಿ ರಾಷ್ಟ್ರೀಯ ಸಮಗ್ರತೆಗೆ ಒದಗಿರುವ ಧಕ್ಕೆಯನ್ನು ವಿವರಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾ.ದೇವಿಡ್ ಕರ್ಕಡ ವಹಿಸಿದ್ದರು.

ಬಂಟ್ವಾಳ

ಸಿ.ಪಿ.ಐ (ಎಂ)ನ ಕೇಂದ್ರ ಸಮಿತಿ ಕರೆಯಂತೆ ಆಗಸ್ಟ್ 14 ರಂದು ಬಂಟ್ವಾಳದಲ್ಲಿ ತಾಲ್ಲೂಕು ಸಮಿತಿ ಆಶ್ರಯದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಿ ಪಿ.ಐ (ಎಂ)ನ ಬಂಟ್ವಾಳ ತಾಲ್ಲೂಕು ಸಮಿತಿ ಕಾರ್ಯದರ್ಶಿ ಕಾ. ಬಿ. ವಾಸುಗಟ್ಟಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಸಾಮ್ರಾಜ್ಯ ಶಾಹಿಗಳಿಂದ ಭಾರತದ ಸಮಗ್ರತೆಗೆ ಒದಗಿರುವ ಗಂಡಾಂತರವನ್ನು ವಿವರಿಸಿದರೆಂದು ವರದಿ ತಿಳಿಸಿದೆ.

ಕೋಟೇಶ್ವರ :

ಆಗಸ್ಟ್ 11 ರಂದು ಕೋಟೇಶ್ವರದಲ್ಲಿ ಪಾರ್ಟಿ ಸದಸ್ಯರ ಮತ್ತು ರೈತ ಕೃಷಿ ಕೂಲಿಕಾರರ ವಿಸ್ತೃತ ಸಭೆ ನಡೆಯಿತು. ರೈತ ಮುಖಂಡರಾದ ಕಾ. ಯು. ದಾಸ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಅಧ್ಯಕ್ಷರಾದ ಕಾ ವಿ. ಮಹಾಬಲ, ಎಸ್. ಎಫ್. ಐ. ನ ಕಾ. ಕೆ. ವಿಶ್ವನಾಥ, ಸಿ.ಪಿ.ಐ.(ಎಂ) ಮುಂದಾಳುಗಳಾದ ಕಾ. ಸಿ. ನಾರಾಯಣ ಮತ್ತು ಕಾ. ಕೆ. ಶಂಕರ್ ಮಾತನಾಡಿ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡಲು ಎಲ್ಲ ವಿಭಾಗಗಳ ಜನತೆಯಲ್ಲೂ ಜಾಗೃತಿ ಉಂಟು ಮಾಡಬೇಕೆಂದು ತಿಳಿಸಿದರು.

ಬಾಗಲಕೋಟೆ

ಸಿ ಐ.ಟಿ.ಯು., ಬಿ.ಎಂ.ಎಸ್., ಜೀವ ವಿಮೆ, ಬ್ಯಾಂಕು ಮೊದಲಾದ ಕಾರ್ಮಿಕ ಸಂಘಗಳ ವತಿಯಿಂದ ತಾ॥ 10-8-86ರಂದು ನಗರಸಭೆಯ ಸಭಾಂಗಣದಲ್ಲಿ ರಾಷ್ಟ್ರೀಯ ಸಮಗ್ರತಾ ದಿನವನ್ನು ಆಚರಿಸಲಾಯಿತು. ಸಿ. ಎಲ್. ದಾಸಣ್ಣನವರ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಭೆಯಲ್ಲಿ ಸಿ.ಐ.ಟಿ. ಯು ಮುಖಂಡರಾದ ಎನ್.ಕೆ. ಉಪಾಧ್ಯಾಯ, ಸಿಮೆಂಟ್ ಕೆಲಸಗಾರರ ಸಂಘದ ಕಾರ್ಯದರ್ಶಿ ನ್ಯೂಟನ್ ಬಿಸಾಯಿ ಮೊದಲಾದವರು ಮಾತಾಡಿ ದೇಶದಲ್ಲಿ ಬೆಳೆದು ಬರುತ್ತಿರುವ ಜಾತಿಯ ವೈಷಮ್ಯ, ಮತೀಯ ಜಗಳ, ಛಿದ್ರಕಾರಿ ಭಯೋತ್ಪಾದಕ ಶಕ್ತಿಗಳ ಅಪಾಯಕಾರಿ ಚಟುವಟಿಕೆಗಳನ್ನು ವಿವರಿಸಿ, ಅಮೇರಿಕನ್ ಸಾಮ್ರಾಜ್ಯಶಾಹಿ ಇಂಥ ಶಕ್ತಿಗಳಿಗೆಲ್ಲಾ ಧನಸಹಾಯ ಮಾಡಿ ಪ್ರೋತ್ಸಾಹ ನೀಡಿ ದೇಶದ ಐಕ್ಯತೆ ಸಮಗ್ರತೆಗೆ ಗಂಡಾಂತರ ಉಂಟು ಮಾಡುತ್ತಿರುವುದರತ್ತ ಗಮನ ಸೆಳೆದು ದುಡಿಯುವ ಜನತೆ ದೇಶದ ಸಮಗ್ರತೆಯ ರಕ್ಷಣೆಗೆ ಮುಂದಾಗಬೇಕೆಂದು ಕರೆ ನೀಡಿದರು. ಸಿ. ಐ. ಟಿ. ಯು, ಮುಖಂಡರಾದ ಡಿ.ಎಂ. ಖಲಾಸಿಯವರು ದಿಲ್ಲಿಯಲ್ಲಿ ನೇ ತಿಂಗಳಲ್ಲಿ ಸೇರಿದ್ದ 10 ಕೇಂದ್ರಿಯ ಕಾರ್ಮಿಕ ಸಂಘಟನೆಗಳ ಕರೆಯನ್ನು ವಿವರಿಸಿ ಜಾತಿಯ ಸೌಹಾರ್ದತೆಯನ್ನು ಕಾಪಾಡಲು ಎಲ್ಲರೂ ಪಣ ತೊಡಬೇಕೆಂದು ಹೇಳಿ ಎಲ್ಲರಿಗೂ ಸ್ವಾಗತ ಕೋರಿದರು.

ಬಿಜಾಪುರ

ರಾಷ್ಟ್ರೀಯ ಭಾವೈಕ್ಯತೆ ಕುರಿತು ಅಸಂಘಟಿತ ಜನರಲ್ಲಿ ಎಷ್ಟು ಆಸ್ತೆ ಇದೆಂಬುದು ತಾ॥ 15 ರಂದು ಬಿಜಾಪುರದಲ್ಲಿ ಸಿ. ಪಿ. ಐ. (ಎಂ), ಸಿ.ಪಿ.ಐ, ಜನತಾ ಪಕ್ಷಗಳ ವತಿಯಿಂದ ನಡೆದ ಸಾರ್ವಜನಿಕ ಸಭೆಯಲ್ಲಿ 3 ಗಂಟೆಗೂ ಹೆಚ್ಚು ಕಾಲ ನಾಗರೀಕರು ಮುಖಂಡರ ಭಾಷಣಗಳನ್ನಾಲಿಸುವುದರಿಂದ ಗಮನಿಸಬಹುದಾಗಿತ್ತು. ಹಿಂದೂ – ಮುಸಲ್ಮಾನರನ್ನೊಳಗೊಂಡು ಎಲ್ಲ ಜಾತಿ – ವರ್ಗಗಳ ಜನರು ಭಾಷಣಗಳನ್ನು ಅತಿ ಗಂಭೀರವಾಗಿ ಕೇಳುತ್ತಾ ಜಾತೀಯ ಸೌಹಾರ್ಧತೆ – ರಾಷ್ಟ್ರೀಯ ಸಮಗ್ರತೆಯನ್ನು ಕಾಪಾಡುವ ಪಣ ತೊಟ್ಟಿರುವುದು ಒಂದು ವಿಶೇಷ ಸಂಗತಿ.

ಐ. ಸಿ. ನಾಗಠಾಣ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಿಪಿಐ (ಎಂ) ಪರವಾಗಿ ವಿ ಎನ್ ಹಳಕಟ್ಟಿ, ಎನ್ ಕೆ ಉಪಾಧ್ಯಾಯ, ಭೀಮಸಿ ಕಲಾದಗಿ, ಸಿ ಪಿ ಐ ಪರವಾಗಿ ಯರನಾಳ, ಲಾಯದ ಗುಂದಿ ಮತ್ತು ಪಿ ಎಸ್ ಪಾಟೀಲ, ಮೊದಲಾದವರು ಸ್ವಾತಂತ್ರ್ಯ ಪೂರ್ವದ ಹಾಗೂ ಅನಂತರದ ದೇಶದ ಪರಿಸ್ಥಿತಿಯನ್ನು ವಿವರಿಸಿ, ಅಮೇರಿಕನ್ ಸಾಮ್ರಾಜ್ಯಶಾಹಿಯ ದೇಶವನ್ನು ವಿಭಜಿಸುವ ಕುತಂತ್ರಗಳನ್ನೂ, ಕ್ರಿಶ್ಚಿಯನ್ ಮಿಶನರಿಗಳ ಚಟುವಟಿಕೆಗಳನ್ನೂ, ಅಧಿಕಾರ ಭದ್ರತೆಗಾಗಿ ಆಳುವ ಬಂಡವಾಳಶಾಹಿ ಪಕ್ಷ ಜಾತೀಯ, ಧರ್ಮೀಯ, ಛಿದ್ರಕಾರಿ ಶಕ್ತಿಗಳನ್ನು ಬೆಂಬಲಿಸುತ್ತಿರುವುದನ್ನು ವಿವರಿಸಿ ಪ. ಬಂಗಾಲ, ತ್ರಿಪುರ ಎಡರಂಗ ಸರಕಾರಗಳ ಆಡಳಿತ ವೈಖರಿಯತ್ತ ಸಭಿಕರ ಗಮನ ಸೆಳೆದು, ಕಾರ್ಮಿಕ, ರೈತ, ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಒತ್ತಿ ಹೇಳಿದರು.

ಹೊಸ ಪೇಟೆ

ಪಾರ್ಟಿಯ ರಾಜ್ಯ ಸಮಿತಿಯ ಕರೆಯಂತೆ “ರಾಷ್ಟ್ರೀಯ ಸಮಗ್ರತಾ ಸಪ್ತಾಹ” ದ ಕಾರ್ಯಕ್ರಮದಂಗವಾಗಿ ಹೊಸಪೇಟೆಯಲ್ಲಿ ದಿನಾಂಕ: 16. 8. 86 ರಂದು ಬಹಿರಂಗ ಸಭೆ ನಡೆಸಲಾಯಿತು. ಸಂಜೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾ : ಪರಶುರಾಮ್‌ಕಲಾಲ್, ಕಾ : ಗುರುಶಾಂತ್ ಎಸ್. ವೈ. ಮಾತನಾಡಿದರು. ರಾಷ್ಟ್ರೀಯ ಸಮಗ್ರತೆ ಏಕತೆಗೆ ಬಂದೊದಗಿರುವ ಗಂಡಾಂತರ, ಅಮೇರಿಕನ್ ಸಾಮ್ರಾಜ್ಯಶಾಹಿಗಳ ಪಿತೂರಿ,, ಕಾರ್ಮಿಕ-ರೈತಾಪಿ ದುಡಿಯುವ ವರ್ಗ ಹಾಗೂ ದೇಶಾಭಿಮಾನಿ ಜನತೆಯು ನಿರ್ವಹಿಸಬೇಕಿರುವ ಪ್ರಮುಖ ಪಾತ್ರವನ್ನು ಸಿ ಪಿ ಐ (ಐ) ಪಾರ್ಟಿಯ ದೃಢವಾದ ನಿಲುವು, ಬಲ ಪಂಥೀಯ ಪಕ್ಷಗಳ ಸಂದರ್ಭ ಸಾಧಕ ನಿಲುವುಗಳನ್ನು ವಿವರಿಸಲಾಯಿತು.

ರಾಷ್ಟ್ರೀಯ ಸಮಗ್ರತೆಗೆ ಗಂಡಾಂತರ ಬೇರೆಲ್ಲೋ ಇದೆಯೆಂದು ಭಾವಿಸಬೇಕಿಲ್ಲ ಅದು ಹಿಂದೂ–ಮುಸ್ಲಿಂ–ಕ್ರಿಶ್ಚಿಯನ್ ಧಾರ್ಮಿಕ ಪ್ರಚೋದನೆಗಳಲ್ಲಿ ಇದೆ. ಇಂಥ ಪ್ರಯತ್ನ ಹೊಸಪೇಟೆ ನಗರದಲ್ಲಿಯೇ ನಡೆಯುತ್ತಿದ್ದು ಇದನ್ನು ಸೋಲಿಸಬೇಕೆಂದು ಕಾಂ : ಗುರುಶಾಂತ್, ಕಲಾಲ್. ಎಚ್ಚರಿಸಿದರು.

ಸ್ವಾಗತ : ಕಾಂ; ಮಂಜುನಾಥ್ ವಂದನಾರ್ಪಣೆ ಕಾಂ: ರಾಮನಾಥ್. ಕ್ರಾಂತಿಗೀತೆ ಕಾಂ: ಅಮೀರ್ ಅವರಿಂದ 1000 ಕರಪತ್ರಗಳ ಪ್ರಚಾರ ನಡೆಸಲಾಗಿದೆ.

ಡಿ. ವೈ. ಎಫ್. ಐ. ನಿಂದ :

ಶಿವಮೊಗ್ಗ

ಆಗಸ್ಟ್ 15 ರಂದು ಶಿವಮೊಗ್ಗದ ಡಿ. ವೈ. ಎಫ್. ಐ ಘಟಕ ರಾಷ್ಟ್ರೀಯ ಸಮಗ್ರತಾ ದಿನವನ್ನು ಆಚರಿಸಿತು. ನೂರಾರು ಯುವ ಜನರು ಸೈಕಲ್ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರೆಂದು ವರದಿಯಾಗಿದೆ. ಸಭೆಯಲ್ಲಿ ಕಾ. ಎಸ್.ಬಿ. ಶಿವಶಂಕರ್, ಕಾ ಬಿ. ಎಸ್. ದಾಸ್, ಸಂಜಯ್ ಕುಮಾರ್ ವರ್ಮಾ, ಕೃಷ್ಣ ಮುಂತಾದವರು ಮಾತನಾಡಿದರು. ಕಾ. ತಿಮ್ಮೇಗೌಡ ಸ್ವಾಗತಿಸಿದರು, ಕಾ. ಇಬ್ರಾಹಿಂ ವಂದನಾರ್ಪಣೆ ಮಾಡಿದರು. ಕಾ. ವಾಸುದೇವ ಅವರು “ದೇಶ ಭಕ್ತಿ” ಗೀತೆಗಳನ್ನು ಹಾಡಿದರೆಂದು ವರದಿ ತಿಳಿಸಿದೆ.

ಹುಬ್ಬಳ್ಳಿ

17-8-86 ರಂದು ಭಾರತ ವಿದ್ಯಾರ್ಥಿ ಫೆಡರೇಶನಿನ ವತಿಯಿಂದ ನಡೆದ ರಾಷ್ಟ್ರೀಯ ಸಮಗ್ರತಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತಾ ಸಿ.ಆರ್.ಭಟ್ ಅವರು, ದೇಶವು ಇಂದು ಎದುರಿಸುತ್ತಿರುವ ನಾನಾ ಸಮಸ್ಯೆಗಳನ್ನು ಎತ್ತಿ ತೋರಿಸಿ, ಅವುಗಳಿಂದ ರಾಷ್ಟ್ರವು ತನ್ನ ಸಮಗ್ರತೆಯನ್ನು ಉಳಿಸಿಕೊಳ್ಳಬೇಕಾದರೆ ಐಕ್ಯ ಹೋರಾಟ ಒಂದೇ ಮಾರ್ಗವೆಂದು ಹೇಳಿದರು. ಡಿ.ವೈ.ಎಫ್.ಐಯ ಗಂಗಾಧರ ಅವರು ಮಾತಾಡುತ್ತ ಅಂತಹ ಹೋರಾಟದಲ್ಲಿ ಯುವಕರು, ವಿದ್ಯಾರ್ಥಿಗಳು ಮುಂದಾಗಬೇಕೆಂದರು. ಬಾಲರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು. ಭಜಂತ್ರಿಯವರು ಸ್ವಾಗತಿಸಿದರು. ಸೋಮೇಶ ಸರವಳೆಯವರು ಅಭಾರ ಮಂಡಿಸಿದರು.

ಹೊಸಪೇಟೆ

ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯನ್ನು ಹೊಸಪೇಟೆ ಚಿತ್ತವಾಡ್ಗಿ ರೋಡ್ ಭಗತ್‌ಸಿಂಗ್ ನಗರದ ಡಿವೈಎಫ್‌ಐ ಘಟಕವು ರಾಜ್ಯ ಸಮಿತಿಯ ಕರೆಯಂತೆ ‘ರಾಷ್ಟ್ರೀಯ ಸಮಗ್ರತಾ ದಿನಾಚರಣೆ’ಯನ್ನಾಗಿ ಆಚರಿಸಿತು.

ಸಮಾರಂಭದ ಅಧ್ಯಕ್ಷತೆಯನ್ನು ಖಾಜಾಸಾಬ್ ವಹಿಸಿದ್ದರು.

ಕಾ॥ ಸಿ. ನಂಜುಂಡಪ್ಪ ಮತ್ತು ಕಾ॥ ವಿ.ಜೆ.ಕೆ. ಯವರ ವಿದೇಶ ಪ್ರವಾಸ

ಸಿ. ಐ. ಟಿ. ಯು ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಸಿ. ನಂಜುಂಡಪ್ಪನವರು ಸಿ. ಐ ಟಿ. ಯು ಪರವಾಗಿ ಆಗಸ್ಟ್ 5ರಂದು ಚೀನಾ ದೇಶಕ್ಕೆ ಹೋಗಿದ್ದಾರೆ.

ಸೆಕ್ರೆಟೇರಿಯೇಟ್ ಸದಸ್ಯರಾದ ವಿ. ಜೆ. ಕೆ. ನಾಯರ್ ಅವರು ಅದೇ ದಿನ ಪಕ್ಷದ ಪರವಾಗಿ ಸೋವಿಯತ್ ಯೂನಿಯನ್‌ಗೆ ಹೋಗಿದ್ದಾರೆ.

ಖಲಿಸ್ತಾನೀ ಉಗ್ರಗಾಮಿ

ಆಗಸ್ಟ 10, 1987. ದೇಶವನ್ನು ಮತ್ತೊಮ್ಮೆ ತಲ್ಲಣಗೊಳಿಸಿದ ಸುದ್ದಿ. ಪುಣೆಯಲ್ಲಿ ಹಾಡುಹಗಲೇ ನಾಲ್ವರು ಅಪರಿಚಿತ ಮೋಟಾರು ಸೈಕಲ್ ಹಾಗೂ ಸ್ಕೂಟರ್ ಸವಾರರು ತಮ್ಮ ಕಾರಿನಲ್ಲಿ ಮನೆಗೆ ಹಿಂದಿರುಗುತ್ತಿದ್ದ ದೇಶದ ಮಾಜಿ ಸೇನಾಧಿಪತಿ ಜನರಲ್ ಎ. ಎಸ್. ವೈದ್ಯರ ಮೇಲೆ ಗುಂಡಿನ ಸುರಿಮಳೆಗರೆದು ಹತ್ಯೆ ಮಾಡಿ ಪರಾರಿಯಾದರು. ಕಾರಿನಲ್ಲೇ ಇದ್ದ ಪೋಲಿಸ್ ಭದ್ರತಾ ಗಾರ್ಡ್ ಏನು ಮಾಡಲೂ ಸಾಧ್ಯವಾಗಲಿಲ್ಲ. ದೇಶಪ್ರೇಮಿಗಳ ತಲ್ಲಣಕ್ಕೆ ಮುಖ್ಯ ಕಾರಣಗಳು —ಒಂದು, ಭಯೋತ್ಪಾದಕತೆ ಮತ್ತೊಮ್ಮೆ ಪಂಜಾಬನ್ನು ದಾಟಿ. ಭದ್ರತಾ ವ್ಯವಸ್ಥೆಯನ್ನು ಭೇಧಿಸಿ ದೂರದ ಪುಣೆಯವರೆಗೂ ತಲುಪಿದೆಯೆಂಬುದು. ಎರಡು ದೇಶದ ಇತರೆಡೆ ಇದರಪ್ರತಿಕ್ರಿಯೆಏನಾಗಬಹುದುಎಂದು ಆದಾಗಲೇ ಪುಣೆಯಲ್ಲಿ ಶಿವಸೇನೆಯಂತಹ ಸಂಕುಚಿತವಾದಿ ಸಂಘಟನೆಗಳು ಜನತೆಯ ಕೋಪ, ತಲ್ಲಣವನ್ನು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಿದ ವರದಿಗಳು ಬಂದಿವೆ.

ಕಳೆದ ಸುಮಾರು ಐದು ವರ್ಷಗಳಿಂದ ಖಾಲಿಸ್ತಾನೀ ಭಯೋತ್ಪಾದಕರು ನಡೆಸಿದ ಅಮಾನುಷ ಹಿಂಸಾಚಾರಗಳೇನು, ಅವರಿಗೆ ನೆರವು-ಕುಮ್ಮಕ್ಕು ನೀಡುವವರಾರು. ಅವರು ಇನ್ನೂ ಸಕ್ರಿಯರಾಗಲು ನೆರವಾದ ಧೋರಣೆಗಳೇನು ಎಂಬುದರ ಸ್ಥೂಲ ಚಿತ್ರಣ ಇಲ್ಲಿದೆ.

1981 ಸೆಪ್ಟಂಬರ್-ಪಂಜಾಬಿನ ಪ್ರಖ್ಯಾತ ಪತ್ರಕರ್ತ ಲಾಲಾಜಗತ್ ನಾರಾಯಣ್ ಕೊಲೆ.

1983ಜನವರಿ - ಚಂಡೀಗಡದ ಬ್ಯಾಂಕಿನಿಂದ 7 ಲಕ್ಷ ರೂ ಲೂಟಿ, ಮಾರ್ಚ್- ನಿರಂಕಾರಿ ನಾಯಕರ ಹತ್ಯೆ.

ಏಪ್ರಿಲ್- ಸ್ವರ್ಣಮಂದಿರದ ಬಳಿ ಡಿ. ಐ. ಜಿ. ಎ. ಸ್ ಅಟ್ವಾಲ್ ಕೊಲೆ.

ಮೇ — ಮಾಜಿ ಒಲಂಪಿಕ್ ಹಾಕಿ ಆಟಗಾರ ಪ್ರಥ್ವಿಪಾಲ್ ಸಿಂಗ್ ಕೊಲೆ ನಿರಂಕಾರಿ ನಾಯಕರ ಹತ್ಯೆ.

ಸೆಪ್ಟಂಬರ್- ಲೂಧಿಯಾನಎಸ್.ಪಿ. ಟಿ. ಆರ್. ಭಜ್ಪೆ ಅವರ ಕೊಲೆಗೆ ಯತ್ನ.

ಅಕ್ಟೋಬರ್. — ಆರು ಬಸ್ ಪ್ರಯಾಣಿಕರಕೊಲೆ. ಸಬ್ ಇನ್ಸ್ಪೆಕ್ಟರ್ ಕೊಲೆ. ವಿಧ್ವಂಸಕ ಕೃತ್ಯದಿಂದ ರೈಲು ಅಪಘಾತದಲ್ಲಿ 17 ಸಾವು.

ನವೆಂಬರ್-ಕಾಂಗ್ರೆಸ್ (ಐ) ನಾಯಕ ಸುರ್ಜಿತ್ ಸಿಂಗ್ ಕೊಲೆ. ಆಗಸ್ಟ 1984ರಲ್ಲಿ ಸರಕಾರ ಹೊರಡಿಸಿದ ಶ್ವೇತಪತ್ರದ ಪ್ರಕಾರ ಅಗಸ್ಟ್ 1982 ರಿಂದ ಡಿಸೆಂಬರ್ 1983 ರವರೆಗೆ 425 ಹಿಂಸಾತ್ಮಕ ಘಟನೆಗಳಲ್ಲಿ 112 ಜನರ ಹತ್ಯೆಯಾಗಿ, 665 ಜನ ಗಾಯಗೊಂಡಿದ್ದಾರೆ.

1984 ಜನವರಿ- ಐದು ರೈಲು ನಿಲ್ದಾಣಗಳಿಗೆ ಬೆಂಕಿ, ಚಿತ್ರಮಂದಿರದಲ್ಲಿ ಸ್ಫೋಟ.

ಫೆಬ್ರವರಿ — ಜಲಂಧರ್ ದೂರದರ್ಶನ ಕೇಂದ್ರದ ಮೇಲೆ ಬಾಂಬ್-ಪತ್ರಕರ್ತನಿಗೆ ಇರಿತ. ಮಾಜಿ, ಡಿ. ಎಸ್. ಪಿ. ಯ. ಮಗನ ಕೊಲೆ. ಪಂಜಾಬ್ ಬಂದ್ ಗಲಬೆಯಲ್ಲಿ 15 ಸಾವು ಸ್ವರ್ಣಮಂದಿರದ ಬಳಿ ಗುಂಡಿನ ಕಾಳಗದಲ್ಲಿ 2 ಸಾವು. ರಾಜ್ಯಾದ್ಯಂತ 46 ಸಾವುಗಳು.

ಮಾರ್ಚ್-ಪೋಲೀಸ್ಅಧಿಕಾರಿ,ಶಿರೋಮಣಿ ಗುರುದ್ವಾರ ಆಡಳಿತ ಸಮಿತಿಯ ಅಧ್ಯಕ್ಷ ಹರಿಬನ್ಸ್‌ಸಿಂಗ್ ನಿಹಾಂಗ್ ನಾಯಕ ಹಾಗೂ ಮೂವರ ಪ್ರಕರ್ತರ ಹತ್ಯೆ.

ಏಪ್ರಿಲ್-ಲೋಕಸಭಾಸದಸ್ಯ ವಿ. ಎನ್ ತಿವಾರಿ. ಚಂಢೀಗಡ - ಪಂಜಾಬ್ ಸುರಕ್ಷ ಸಮಿತಿ ಅಧ್ಯಕ್ಷರ, ಪಿರೋಜ್ ಪುದರಲ್ಲಿ ಆರು ಜನರ ಕೊಲೆ.

ಮೇ — ಅಮೃತಸರದಲ್ಲಿ ನಿವೃತ್ತ ಡಿ. ಎಸ್. ಪಿ. ಪತ್ನಿ, ಅಂಗರಕ್ಷಕನ ಹಿಂದ್ ಸಮಾಚಾರ್ ಪತ್ರಿಕೆಯ ಮುಖ್ಯ ಸಂಪಾದಕ ಹಾಗೂ ಲಾಲಾ ಜಗತ್‌ನಾರಾಯಣರ ಪುತ್ರ ರಮೇಶ್ ಚಂದರ್‌ರ ಹತ್ಯೆ.

ಫರೀದ್‌ಕೋಟ್ ಜಿಲ್ಲೆಯಲ್ಲಿ ಬಸ್ ಪ್ರಯಾಣಿಕರ ಮೇಲೆ ಹಲ್ಲೆ, ನಾಲ್ವರ ಸಾವು ಸ್ವರ್ಣಮಂದಿರದ ಹಾಗೂ ಇತರ ಗುರುದ್ವಾರಗಳಲ್ಲಿ ಆಶ್ರಯ ಪಡೆದ ಉಗ್ರಗಾಮಿಗಳ ವ್ಯಾಪಕ ಹಿಂಸಾಕೃತ್ಯಗಳಿಂದಾಗಿ ನಾಗರಿಕ ಆಡಳಿತಕ್ಕೆ ನೆರವಾಗಲು ಸೇನೆ.

ಜೂನ್— "ಆಪರೇಶನ್ ಬ್ಲೂ ಸ್ಟಾರ್" ನಂತರ ಸ್ವರ್ಣಮಂದಿರದೊಳಗೆ ಹಲವಾರು ಸುರಂಗಗಳ ಬಂಕರುಗಳ, ಅತ್ಯಾಧುನಿಕ ಶಸ್ತ್ರಾಸ್ತ್ರಗಳ ರಾಶಿಯ ಪತ್ತೆ ಪೂಜಾಸ್ಥಳದಲ್ಲಿ ಇಂತಹ ಭಾರೀ ಶಸ್ತ್ರಾಗಾರ ಗುರುದ್ವಾರಗಳ ನಿರ್ವಹಣೆಯ ಇತಿಹಾಸದಲ್ಲಿ ಹಿಂದೆಂದೂ ಹೀಗಾಗಿರಲಿಲ್ಲ

ಬಟಾಲಾ-ಗುರುದಾಸಪುರ ರಸ್ತೆಯಲ್ಲಿ ಎಂಟು ಬಸ್ ಪ್ರಯಾಣಿಕರ ಕೊಲೆ ಜನವರಿ1ರಿಂದ ಜೂನ್ 3ರ ವರೆಗೆ 775 ಹಿಂಸಾ ಘಟನೆಗಳಲ್ಲಿ 298 ಜನ ಕೊಲ್ಲಲ್ಪಟ್ಟು, 525 ಜನ ಗಾಯಗೊಂಡರು -ಸರಕಾರದ ಶ್ವೇತ ಪತ್ರದ ಪ್ರಕಾರ.

ಸೆಪ್ಟಂಬರ್- ಗುರುದಾಸಪುರ ಜಿಲ್ಲೆಯಲ್ಲಿ ಬಸ್‌ನ್ನು ತಡೆಹಿಡಿದು ಹತ್ತು ಪ್ರಯಾಣಿಕರ ಕೊಲೆ.

ಆಕ್ಟೋಬರ್ 30- ಪ್ರಧಾನಮಂತ್ರಿ ಇಂದಿರಾಗಾಂದಿ ಕೊಲೆ, ಇದಕ್ಕೆ ಪ್ರತಿಕ್ರಿಯೆಯಾಗಿ ದಿಲ್ಲಿ, ಲಕ್ನೋ, ಮತ್ತು ಇತರ ಹಲವು ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಸಿ… ಮೇಲೆ ತೀವ್ರ ಅಮಾನುಷ. … ಹತ್ಯಾಕಾಂಡ.

1985 ಏಪ್ರಿಲ್, ಎ.ಐ.ಸಿ.ಸಿ.(… ಪ್ರಧಾನ ಕಾರ್ಯದರ್ಶಿ ಆರ್. ಎ… ಭಾಟಿಯಾ ಮೇಲೆ ಹಲ್ಲೆ. ಅವರ ಬ… ಜೊತೆಗಾರನ ಹತ್ಯೆ.

ಮೇ—ದಿಲ್ಲಿ ಮತ್ತು ಹರ್ಯಾಣ… ಹಲವೆಡೆ ಬಾಂಬ್ ಸ್ಫೋಟಗಳ… ಅಮಾಯಕ ಜನರ ಅಮಾನ… ಕೊಲೆ.

ಜೂನ್--ಏರ್ ಇಂಡಿಯಾ ವಿಮಾ… "ಕನಿಷ್ಕ"ದಲ್ಲಿ ಸ್ಫೋಟದಿಂದಾಗಿ ಎ… 329 ಜನರ. ಸಾವು. ಜಪಾನಿನ ನ… ವಿಮಾನ ನಿಲ್ದಾಣದಲ್ಲಿ ಏ… ಇಂಡಿಯಾ ವಿಮಾನಕ್ಕೆ ಸಾಮಾ… ಸಾಗಿಸುವಾಗ ನಡೆದ ಬಾಂ… ಸ್ಫೋಟದಲ್ಲಿ ಇಬ್ಬರ ಸಾವು.

ಜುಲೈ—ಸ್ವರ್ಣಮಂದಿರ ಮರಾ… ಳಗೆ ಸಂತ ಲೋಂಗೋವಾಲ್ ಹ… ಅವರ ಬೆಂಬಲಿಗರ ಮೇಲೆ ಹಲ್ಲೆ.

ಆಗಸ್ಟ--ಸಂತ ಲೋಂಗೋವಾ… ಹತ್ಯೆ.

ನವಂಬರ್— ಶಿರೋಮಣಿ ಗ… ದ್ವಾರಾ ಆಡಳಿತ ಸಮಿತಿಯ ಮುಖ… ಜಿ.ಎಸ್. ತೋಹ್ರಾ ಮೇಲೆ ಹ… ನಂಗಲ್-ಲಿಂಬಾಲಾ ರೈಲು… ಯಲ್ಲಿ ಟೈಂ ಬಾಂಬ್‌ಗಳ ಸ್ಫೋಟ… ಕನಿಷ್ಟ ಇಬ್ಬರ ಸಾವು, 19 ಇತ… ಅಂಗವಿಕಲತೆ.

1986ಜನವರಿ 26--ಸ್ವರ್ಣಮ… ರದ ಅಕಾಲ್ ತಖ್ತ್ ಹಾಗೂ ಹಮಿ… ದರ್ ಸಾಹೀಬ್‌ನ್ನು ಆಕ್ರಮಿಸಿ ಮ… ರದ ಮುಖ್ಯಅರ್ಚಕರನ್ನು ಬಖಾ… ಮಾಡಿ, ಅಕಾಲಿ ಮುಖಂಡರ… "ವಿಶ್ವಾಸ ಘಾತುಕ"ರೆಂದು ಘೋ… ಖಾಲಿಸ್ತಾನೀ ಘೋಷಣೆಗಳು.

ಫೆಬ್ರವರಿ ಮಾರ್ಚ್- ಬತಾ… ಜಲಂಧರ್, ಮೊಕ್ತಸರ್, ಲೂಧಿಯ… ಕಪೂರ್ತಲಾ ಇತ್ಯಾದಿ ಹಲ… ಕರ್ಫ್ಯೂ, ಬತಾಲಾದಲ್ಲಿ ಒಂದು ನ… ಮುತ್ತಿಗೆಯಲ್ಲಿ ಜನಸಾಮಾನ್ಯ… ಹಸಿವೆಯಿಂದ ಕಂಗಾಲು.

ಚಂಡೀಘಡದಲ್ಲಿ ಹಿಂಸಾಚಾರ. ಪಿ.ಐ ಮುಖಂಡ ಅರ್ಜುನ್‌ಸಿ… ಮಸ್ತಾನಾ ಮತ್ತು ಅವರ ಗಾಡ್… ಹತ್ಯೆ. ಆನಂದಪುರ್ ಸಾಹೇಬ್… ಅಕಾಲಿದಳದ ಸಭೆಯ ಮೇಲೆ ಖಡ… ರಿಗಳ ತೀವ್ರ ಹಲ್ಲೆ.

ಮಣ್ಣು ಹದ ಮಾಡಿಕೊಟ್ಟವರು

ಕಳೆದ ನಾಲ್ಕೈದು ವರ್ಷಗಳಲ್ಲಿ. ಪಂಜಾಬಿನಲ್ಲಿ ಉಗ್ರಗಾಮಿತ್ವ, ಪ್ರತ್ಯೇಕತಾವಾದ ಬೆಳೆಯಲು ಫಲವತ್ತಾದ ಮಣ್ಣು ಒದಗಿಸಿದ ಸಂಗತಿಗಳು ಎರಡು ಕಾಂಗ್ರೆಸ್ (ಐ) ನ ಸಂಕುಚಿತ ರಾಜಕೀಯದಿಂದ ಪ್ರೇರಿತವಾದ ಅನಿಶ್ಚಿತತೆಯ ಧೋರಣೆ ಮತ್ತು ಧರ್ಮ ಹಾಗೂ ರಾಜಕೀಯವನ್ನು ಬೆರೆಸುವ ಅಕಾಲಿದಳದ ಧೋರಣೆಯಲ್ಲಿನ ಚಂಚಲತೆ.

ರಾಜೀವ್‌ಗಾಂಧಿ—ಲೋಂಗೋವಾಲ್ ಒಪ್ಪಂದದ ಮೊದಲು

ಭಿಂದ್ರನ್‌ವಾಲೆಯ ಒತ್ತಡದಿಂದ 1982 ರ ಆಗಸ್ಟ 3 ರಂದು ಆಕಾಲಿ ದಳದ "ಧರ್ಮಯುದ್ಧ" ಚಳುವಳಿ ಆರಂಭವಾದ ನಂತರ ಒಂದು ವರ್ಷದೊಳಗೆ ಅಂದರೆ ನವಂಬರ್ 2, ನವಂಬರ್ 18, ಜನವರಿ 1983 ಹಾಗೂ ಏಪ್ರಿಲ್ 20- ಹೀಗೆ ನಾಲ್ಕು ಬಾರಿ ಇನ್ನೇನು ಒಪ್ಪಂದ ಆಗಿಯೇ ಬಿಟ್ಟಿತು ಎನ್ನುವಾಗ ಮಾತುಕತೆ ಮುರಿದು ಹಾಕಿದರು. ಪ್ರತಿಬಾರಿಯೂ ಇದಕ್ಕೆ ಕಾರಣ ಕೇಂದ್ರ ಸರ್ಕಾರದ ಕೊನೇಗಳಿಗೆಯ ಹಿಂದೇಟು. ಭಿಂದ್ರನ್‌ವಾಲೆಯನ್ನು ಓಲೈಸುವ, ಉಗ್ರಗಾಮಿಗಳನ್ನು ಕೂಡಾ ಒಪ್ಪಂದದಲ್ಲಿ ಸೇರಿಸಿಕೊಳ್ಳುವ, ಹರ್‍ಯಾಣಕ್ಕೆ ಕೆಲವು ಪ್ರದೇಶಗಳನ್ನು ಕೊಡಲೇಬೇಕೆಂಬ ಕಾಂಗ್ರೆಸ್ (ಐ) ನ ಹಠದಿಂದ ಹೀಗಾಯಿತು.

ಸ್ವರ್ಣಮಂದಿರದೊಳಗೆ ಸೈನ್ಯ ಪ್ರವೇಶದಂತಹ ಕಾರ್ಯಕ್ರಮ ಮಾಡಿದ ನಂತರವೇ 1984 ಜೂನ್‌ನಲ್ಲಿ ಇಂಧಿರಾಗಾಂಧಿಯವರು, ಇನ್ನೂ ಒಂದು ವರ್ಷದ ನಂತರ ಜುಲೈ 1985 ರಲ್ಲಿ ರಾಜೀವ್ ಗಾಂಧಿಯವರು ಸಂತ ಲೋಂಗೋವಾಲ್ ಜೊತೆ ಮಾಡಿಕೊಂಡಒಪ್ಪಂದದ ಅಂಶಗಳು 1983ರ ಜೂನ್‌ನಲ್ಲಿ ವಿರೋಧ ಪಕ್ಷಗಳು ಸೂಚಿಸಿದ ಹಾಗೂ ಅಕಾಲಿದಳ ಅಗಲೇ ಒಪ್ಪಿಕೊಂಡಿದ್ದ ಅಂಶಗಳೇ ಎಂಬುದು ಗಮನಾರ್ಹ.

ಒಪ್ಪಂದದ ನಂತರ— ರಾಜೀವ್ ಗಾಂಧಿ ಲೋಂಗೋವಾಲ್ ಒಪ್ಪಂದದ ಪ್ರಕಾರ ಪಂಜಾಬಿಗೆ ಚಂಡೀಘಢ ಹಾಗೂ ಅದಕ್ಕೆ ಬದಲಾಗಿ ಹರ್‍ಯಾಣಾಕ್ಕೆ ಹಿಂದಿ ಮಾತನಾಡುವ ಪ್ರದೇಶಗಳು ಜನವರಿ 26, 1986 ರಂದು ವರ್ಗಾವಣೆಯಾಗ ಬೇಕಿತ್ತು. ಕೇಂದ್ರ ಸರ್ಕಾರದ ತಪ್ಪು ಕ್ರಮಗಳಿಂದಾಗಿ ಇದು ಅಗಲಿಲ್ಲ. ಜೂನ್ 21, 1986 ಎಂದು ಇನ್ನೊಂದು ದಿನ ಗೊತ್ತು ಪಡಿಸಲಾಯಿತು. ಆ ದಿನವೂ ಕಳೆದು ಹೋಯಿತು. ಒಪ್ಪಂದದ ಈ ಅಂಶ ಇನ್ನೂ ಜ್ಯಾರಿಯಾಗಿಲ್ಲ. ಈ ನಡುವೆ ಹರ್‍ಯಾಣಾದ ಕಾಂಗ್ರೆಸ್ (ಐ) ಮುಖ್ಯಮಂತ್ರಿ ಇದರ ವಿರುದ್ಧ ಸತತ ಯತ್ನ ಮುಂದುವರೆಸುತ್ತಿದ್ದಾರೆ. !

ಒಪ್ಪಂದದ ಇನ್ನೊಂದು ಕಲಮಿನ ಪ್ರಕಾರ ಈ ವರ್ಷದ ಜನವರಿಯೊಳಗೆ ನದಿನೀರಿನ ವಿವಾದ ತೀರ್ಮಾನವಾಗಬೇಕಿತ್ತು. ಆದರೆ ಇದಕ್ಕೆ ಆಯೋಗ ನೇಮಿಸಿದ್ದೇ ದೀರ್ಘ ನಿದ್ರೆಯಿಂದ ಎಚ್ಚೆತ್ತ ಮೇಲೆ; ಆಗಲೂ ಅನಗತ್ಯ ವಿವಾದಗಳನ್ನು ಸೃಷ್ಟಿಸಿ, ತೀರ್ಮಾನ ಒಂದು ವರ್ಷವಾದರೂ ಬಂದಿಲ್ಲ.

ಸಟ್ಲೇಜ್-ಯಮುನಾ ಲಿಂಕ್ ಕಾಲುವೆ ಆಗಸ್ಟ 15, 1986ರೊಳಗೆ ಪೂರ್ಣಗೊಳ್ಳಬೇಕಿತ್ತು. ಪಂಜಾಬ್ ಸರಕಾರ ಈ ಬಗ್ಗೆ ಗಂಭೀರ ಪ್ರಯತ್ನ ನಡೆಸಲಿಲ್ಲ ಕೇಂದ್ರಸರ್ಕಾರವೂ ಸುಮ್ಮನೆ ಕುಳಿತುಕೊಂಡಿದೆ.

ಈಗ ಈ ಮೂರು ಅಂಶಗಳು ಒಪ್ಪಂದದ ವಿರೋಧಿಗಳ, ಉಗ್ರಗಾಮಿಗಳ ಕೈಗೆ ಅರ್ಪಿತವಾಗಿರುವ ಆಯುಧಗಳು. □

ಗಳು: ಒಂದು ಹಿನ್ನೋಟ

ರ್ರಿಲ್ — ಸ್ವರ್ಣಮಂದಿರದಿಂದ ಲಿಸ್ತಾನದ ಸಮಾನಾಂತರ ಸರ ಾಡ ಘೋಷಣೆ.

— ಗುರುದಾಸಪುರ ಹಾಗೂ ೃತಸರ ಜಿಲ್ಲೆಗಳ ಕೆಲವಡೆ ಅಲ್ಪ ್ಯಾತರಲ್ಲಿ ತೀವ್ರ ಅಭದ್ರತೆಯ ವನೆಯಿಂದಾಗಿ ವಲಸೆ.

ಾನ್—ಸ್ವರ್ಣಮಂದಿರವನ್ನು ಮತ್ತೆ ್ರಮಿಸಿಕೊಳ್ಳುವ ಪ್ರಯತ್ನವನ್ನು ಎದುರಿಸಿದ ಗುರುದ್ವಾರ ಆಡಳಿತ ಸಮಿತಿಯ ಟಾಸ್ಕ್‌ಫೋರ್ಸ್‌ಮೇಲೆ ದಾಳಿ–ಒಬ್ಬನ ಸಾವು.

ಜುಲೈ—ಚಂಡೀಘಡದತ್ತ ಹೊರಟಿದ್ದ ಬಸ್ಸಿನಲ್ಲಿ ಮುಕ್ತಸರ್ ಬಳಿ ಗುಂಡಿನ ಸುರಿಮಳೆಗೈದು 16 ಪ್ರಯಾಣಿಕರ ಕೊಲೆ, ಆರು ಪ್ರಯಾಣಿಕರಿಗೆ ತೀವ್ರ ಗಾಯ.

ಆಗಸ್ಟ್ -- ಪುಣೆಯಲ್ಲಿ ಜನರಲ್ ವೈದ್ಯರ ಕೊಲೆ.

[ಇವು ಕೇವಲ ಪ್ರಮುಖ ಕೃತ್ಯಗಳಷ್ಟೆ. ಇವಲ್ಲದೆ ಸುಮಾರಾಗಿ ಸತತವಾಗಿ ಅಮಾಯಕ ಜನರ ಮೇಲೆ ಹಲ್ಲೆ, ಕೊಲೆ, ಲೂಟಿ ಈ ಐದು ವರ್ಷಗಳಲ್ಲಿ ನಡೆಯುತ್ತಲೇ ಬಂದಿವೆ.]

○

ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋರವರ ಪ್ರಾಣದ ಮೇಲೆ ಇಪ್ಪತ್ತಕ್ಕೂ ಹೆಚ್ಚು ಬಾರಿ ಹಲ್ಲೆ ನಡೆಸಿದರೂ ಸಾಮ್ರಾಜ್ಯಶಾಹಿಗಳಿಗೆ ಯಶಸ್ಸು ದಕ್ಕಲಿಲ್ಲ. ನಿಕಾರಗುವಾದ ಡೇನಿಯಲ್ ಒರ್ಟೆಗಾರವರ ಹತ್ಯೆಯ ಅವರ ಪ್ರಯತ್ನವೂ ವಿಫಲಗೊಂಡಿತು. ಜಗತ್ತಿನ ಅತ್ಯಂತ ಶಕ್ತಿಶಾಲೀ ಸಾಮ್ರಾಜ್ಯಶಾಹೀ ದೇಶದ ಪಕ್ಕದಲ್ಲೇ ಇರುವ ಈ ಪುಟ್ಟ ದೇಶಗಳು ಸಾಮ್ರಾಜ್ಯಶಾಹಿಗಳ ಪಿತೂರಿಗಳನ್ನು ವಿಫಲಗೊಳಿಸಲು ಶಕ್ತವಾದವು. ಆದರೆ ಭಾರತ, ಬಾಂಗ್ಲಾದೇಶ, ಇರಾನ್‌ನಂತಹ ದೇಶಗಳು ? ನಮ್ಮ ಪ್ರಧಾನ ಮಂತ್ರಿಗಳ ಕಚೇರಿಯಲ್ಲೇ ಸಾಮ್ರಾಜ್ಯಶಾಹೀ ಏಜೆಂಟರು ಐದು ವರ್ಷಗಳ ಕಾಲ ಎಗ್ಗಿಲ್ಲದೆ ಸಕ್ರಿಯರಾಗಿರುತ್ತಾರೆ. ನಮ್ಮ ಪ್ರಧಾನ ಮಂತ್ರಿಗಳು ಮೊದಲ ಏಟಿಗೇ ಅವರ ಪಿತೂರಿಗೆ ಬಲಿಯಾಗುತ್ತಾರೆ ! ಕಾರ್ಮಿಕರ ಪ್ರಭುತ್ವದಲ್ಲಿರುವ ದೇಶಗಳು ಹಾಗೂ ಬೂರ್ಜ್ವಾ ಪ್ರಭುತ್ವದಲ್ಲಿರುವ ದೇಶಗಳ ನಡುವಿನ ವ್ಯತ್ಯಾಸ ಇದೇ ಅಲ್ಲವೇ ? ಅಂದರೆ ದೇಶದ ಹಿತಾಸಕ್ತಿ ಯಾವ ವರ್ಗದ ಕೈಯಲ್ಲಿ ಭದ್ರವಾಗಿದೆ ?

ಭಯೋತ್ಪಾದಕರ ಬೆನ್ನ ಹಿಂದೆ

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸ್ಟ್ ಶಕ್ತಿಗಳ ನಿರ್ನಾಮ ಹಾಗು ಂದು ಶಕ್ತಿಶಾಲೀ ಸಮಾಜವಾದೀ ಣದ ಉದಯ–ಈ ಹಿನ್ನೆಲೆಯಲ್ಲಿ ಸಾಹತುಶಾಹಿಯಿಂದ ಒಡೊಂದಾಗಿ ಾರತವೂ ಸೇರಿದಂತೆ ಸುಮಾರಾಗಿ ಲ್ಲಾ ದೇಶಗಳ ವಿಮೋಚನೆಯನ್ನು ಡೆಯುವುದು ಸಾಮ್ರಾಜ್ಯಶಾಹಿಗಳಿಗೆ ಾಧ್ಯವಾಗಲಿಲ್ಲ. ಆಗ ಜಗತ್ತಿನ ಮೇಲೆ ನ್ನ ಪ್ರಾಬಲ್ಯ ಉಳಿಸಿಕೊಳ್ಳಲು ನ್ಮ ಶೋಷಣೆಯನ್ನು ಮುಂದುವರೆ ಲು ಅವರು ಹೂಡಿದ ಉಪಾಯ ೆಂದರೆ ನವವಿಮೋಚಿತ ದೇಶಗಳ ಮೇಲೆ ನೇರ ಅಥವಾ ಪರೋಕ್ಷ ಂಡಿತ ಮತ್ತು ಈ ದೇಶಗಳಿಗೆ ಾರ್ಮಿಕ ಮತ್ತು ಜನಾಂಗೀಯ ುಂಪುಗಳನ್ನು ಎತ್ತಿಕಟ್ಟುವುದು, ಾಷ್ಟ್ರೀಯ ವಿಮೋಚನಾ ಹೋರಾಟದ ುಂದಾಳುಗಳನ್ನು ಹಾಗೂ ಕಮ್ಯೂನಿಸ್ಟ್ ಮುಂದಾಳುಗಳನ್ನು ಕೊಲೆ ಮಾಡಿಸುವುದು. ಸಿ.ಐ.ಎ. ಹುಟ್ಟಿದ್ದೇ ಈ ಉದ್ದೇಶ ಸಾಧನೆಗೆ. ಕ್ಯೂಬಾದ ್ರಾಂತಿಯ ಮುಖಂಡ ಕ್ಯಾಸ್ಟ್ರೋರ ರ ಹತ್ಯೆಗೆ ಇಪ್ಪತ್ತಕ್ಕೂ ಹೆಚ್ಚು ಬಾರಿ ್ರಯತ್ನ, ಇರಾನಿನ ಪ್ರಜಾಪ್ರಭುತ್ವ ಾದೀ ಮುಖಂಡ ಮೊಜಾದೆಹ್‌ಕೊಲೆ, ಕಾರಗುವಾದ ಕ್ರಾಂತಿಯ ಮುಖಂಡ ರ್ಟೆಗಾವೂ ವಿರುದ್ಧ ಇತ್ತೀಚಿನ ಫಲ ಪ್ರಯತ್ನ, ನಮ್ಮ ಈ ಉಪ ುಖಂಡದಲ್ಲೇ ಬರ್ಮಾದ ಆಂಗ್ ಾನ್, ಪಾಕಿಸ್ಥಾನದ ಲಿಯಾಕತ್ ಲಿಖಾನ್, ಶ್ರೀಲಂಕಾದ ಸೊಲೊಮನ್ ಬಂಡಾರನಾಯ್ಕೆಹಾಗೂ ಾಂಗ್ಲಾದೇಶದ ಮುಜಿಬುರ್‌ರೆಹಮಾನ್ ಹಾಗೂ ಇವೆಲ್ಲದರ ಹಿಂದೆ ಇದ್ದ ಸಾಮ್ರಾಜ್ಯ ಶಾಹಿಗಳೇ ನಮ್ಮ ೇಶದ ಪ್ರಧಾನಿ ಇಂದಿರಾ ಗಾಂಧಿಯ ರ ಹತ್ಯೆ ಮಾಡಿದ, ಲಾಲಾ ಜಗತ್ ಾರಾಯಣರಿಂದ ಹಿಡಿದು ಜನರಲ್ ೈದ್ಯರ ವರೆಗೆ ಹಲವಾರು ಪ್ರಮುಖ ನಾಗರೀಕರನ್ನು ಹಾಗೂ ಅಸಂಖ್ಯಾತ ಅಮಾಯಕ ಜನಸಾಮಾನ್ಯರನ್ನು ಕೊಂದಿರುವಖಾಲಿಸ್ತಾನೀ ಉಗ್ರಗಾಮಿಗಳ ಹಿಂದೆ ಕೂಡಾ ಇದ್ದಾರೆಂಬುದು ಕಳೆದೆರಡು ವರ್ಷಗಳಲ್ಲಿ ಬಯಲಿಗೆ ಬಂದ ಸಂಗತಿಗಳಿಂದ ಸ್ಪಷ್ಟವಾಗಿದೆ.

● ಕೆಲವು ವರ್ಷಗಳ ಹಿಂದೆ "ಪ್ರಾಜೆಕ್ಟ್ ಬ್ರಹ್ಮಪುತ್ರಾ" ಎಂಬ ಸುತ್ತೋಲೆ ಅಮೆರಿಕನ್ ಸಮಾಚಾರ ಸೇವೆಯಿಂದ ಹೊರಟಿತ್ತು. ಬ್ರಹ್ಮಪುತ್ರಾ ನದಿಯ ಪೂರ್ವಕ್ಕಿರುವ ಪ್ರದೇಶಗಳನ್ನು ಭಾರತದಿಂದ ಪ್ರತ್ಯೇಕಿಸಿ ಪ್ರತ್ಯೇಕ ಪ್ರಭುತ್ವ ಸ್ಥಾಪಿಸುವ "ಸಂಭಾವ್ಯತೆ"ಯ ಬಗ್ಗೆ ಈ "ಸುತ್ತೋಲೆ" ಚರ್ಚಿಸಿತ್ತು ! ಆಮೇಲೆ ಅಸ್ಸಾಂ ಹಾಗೂ ಇತರ ಈಶಾನ್ಯ ಪ್ರದೇಶಗಳಲ್ಲಿ ಪ್ರತ್ಯೇಕತಾ ಚಳುವಳಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಂದ ಹೇಗೆ ಬೆಂಬಲ ದೊರೆಯಿತು ಎನ್ನುವುದನ್ನು ನಾವು ಕಂಡಿದ್ದೇವೆ. ಇದಾದ ನಂತರ "ಕಿರ್ಕ್‌ಪ್ಯಾಟ್ರಿಕ್ ಮೆಮೋರಂಡಂ" ಬಂತು ಈಗ ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಅಮೆರಿಕದ ಸ್ಥಾಯೀ ಪ್ರತಿನಿಧಿಯಾಗಿರುವ ಜೀನ್ ಕಿರ್ಕ್‌ಪ್ಯಾಟ್ರಿಕ್ ಎಂಬಾಕೆ ಭಾರತದ ಛಿದ್ರೀಕರಣ ಅಮೆರಿಕನ್ ಹಿತಾಸಕ್ತಿಗೆ ಪೂರಕವಾದುದು ಎಂಬ ಸಿದ್ಧಾಂತ ಪ್ರತಿಪಾದಿಸಿದ "ಸ್ಮರಣಪತ್ರ" ವಿದು !

ಭಾರತದಲ್ಲಿ "ಖಾಲಿಸ್ಥಾನ"ದ ಬೇಡಿಕೆಯಿದ್ದಾಗ ಆ ಬೇಡಿಕೆಯನ್ನು ಪ್ಯೂಟೋರಿಕೋ ದೇಶದ ಜನರ ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೆ ಹೋಲಿಸಿದವರು ಆಗ ಭಾರತದಲ್ಲಿ ಅಮೆರಿಕನ್ ದೇಶದ ರಾಯಭಾರಿಯಾಗಿದ್ದವರು !

● ಗಂಗಾಸಿಂಗ್ ಢಿಲ್ಲೋಂಗಳಿಗೆ, ಜಗಜಿತ್‌ಸಿಂಗ್ ಚಾವಾಣ್‌ಗಳಿಗೆ ಎಲ್ಲಾ ಪ್ರಕಾರದ ಆಶ್ರಯ ಪ್ರಚಾರದ ನೆರವು ಕೊಟ್ಟವರು ಅಮೆರಿಕಾ, ಕೆನಡಾ, ಬ್ರಿಟನ್ ಮತ್ತು ಪಶ್ಚಿಮ ಜರ್ಮನಿಯ ಬಂಡವಾಳಶಾಹೀ ಸುದ್ದಿಮಾಧ್ಯಮಗಳು. ಇಂದಿರಾ ಗಾಂಧಿಯುವರ ಕೊಲೆ ನಡೆದಾಗ ಆ ಬಗ್ಗೆ ಸಂತೋಷದಿಂದ ಹೇಳಿಕೆನೀಡಿ, ಉಗ್ರಗಾಮಿಗಳ ಹತ್ಯಾ ಪಟ್ಟಿಯಲ್ಲಿನ ಇತರರ ಹೆಸರು ಸಾರುವ ಧಾಷ್ಟ್ಯ ಈ ಸ್ವಯಂಘೋಷಿತ "ಖಾಲಿಸ್ತಾನೀ" ಮುಖಂಡರು"ಗಳಿಗೆ ಬಂದಿದ್ದು ಈ ಆಶ್ರಯ, ಪ್ರಚಾರ ಮತ್ತು ನೆರವಿನಿಂದಾಗಿಯೇ.

ಸ್ವರ್ಣಮಂದಿರದೊಳಗೆ ಸೈನ್ಯ ಪ್ರವೇಶದ ಮೊದಲು ಹಾಗೂ, ಆಮೇಲೆ ಪಾಶ್ಚಿಮಾತ್ಯ ಸುದ್ದಿ ಮಾಧ್ಯಮಗಳ ಅಪಪ್ರಚಾರದಿಂದಾಗಿ ಬ್ರಿಟನ್ನಿನ ಸಿಖ್ಖ ಸಮುದಾಯದಲ್ಲಿ ಪೂರ್ಣವಾಗಿ ಭಾರತ-ವಿರೋಧಿ ಭಾವನೆ ಹರಡಿದ್ದಾಗ ಸಿ.ಪಿ.ಐ. (ಎಂ) ಪಾಲಿಟ್‌ಬ್ಯುರೋ ಸದಸ್ಯ ಸುರ್ಜೀತ್‌ರವರ ಬ್ರಿಟನ್ ಭೇಟಿ ಬಹಳಷ್ಟು ಸಿಖ್ಖರಲ್ಲಿನ ತಪ್ಪು ಭಾವನೆಗಳನ್ನು ಹೋಗಲಾಡಿಸಿತು. ಇದರ ನಂತರ ಬ್ರಿಟನ್ನಿನಲ್ಲಿನ ಸಿ.ಪಿ.ಐ. (ಎಂ) ಹಿತೈಷಿಗಳ ಮೇಲೆ ಉಗ್ರಗಾಮಿಗಳಿಂದ ಹಲವಾರು ಹಲ್ಲೆಗಳು ನಡೆಯಲಾರಂಭಿಸಿದವು.

ಲೋಂಗೋವಾಲ್ ಬೆಂಬಲಿಗರಿಗೆ ಉಗ್ರಗಾಮಿಗಳ ಹಲ್ಲೆಗಳ, ಕುಕೃತ್ಯಗಳ ವಿರುದ್ಧ ಮೆರವಣಿಗೆ ನಡೆಸಲು ಅವಕಾಶ ನಿರಾಕರಿಸಿದ ಬ್ರಿಟಿಶ್ ಪೋಲೀಸರು "ಆಪರೇಶನ್ ಬ್ಲೂ ಸ್ಟಾರ್" ವಿರುದ್ಧ ಪ್ರತಿಭಟನೆ ಪ್ರದರ್ಶಿಸಲು ಚೌಹಾಣ್ ಬೆಂಬಲಿಗರಿಗೆ ಅವಕಾಶ ನೀಡಿತು ! ಈಗಲೂ ಭಾರತ–ವಿರೋಧಿ ಚಟುವಟಿಕೆಗಳಲ್ಲಿ ನಿರತರಾಗಿರುವ ಉಗ್ರಗಾಮಿಗಳ ವಿರುದ್ಧ ಕ್ರಮ ಕೈಗೊಳ್ಳಲು ಏನೇನೋ ಕುಂಟು ನೆಪವೊಡ್ಡಿ ಥ್ಯಾಚರ್ ಸರಕಾರ ನಿರಾಕರಿಸುತ್ತಿದೆ.

○ ಇಂದಿರಾ ಗಾಂಧಿ ಕೊಲೆಯ ನಂತರ ಡಿಸೆಂಬರ್ 1984 ರಲ್ಲಿ ಇನ್ನೊಂದು ಅಮೆರಿಕನ್ ಪಿತೂರಿ ಬಯಲಾಯಿತು. ಈ ಬಾರಿಯ "ಅಧ್ಯಯನ"ದ ಹೆಸರು– "ಒತ್ತಡದಲ್ಲಿ ಭಾರತ–ರಾಜಕೀಯ ಸ್ಥಿರತೆಯ ಸಂಭಾವನೆಗಳು". ಆದ ಒಂದು ಅಧ್ಯಾಯದ ಹೆಸರು-"ಇಂದಿರಾ ಗಾಂಧಿಯ ಮರಣದ ಸಂದರ್ಭದಲ್ಲಿ ಉತ್ತರಾಧಿಕಾರದ ಪ್ರಶ್ನೆ". ಇಂದಿರಾ ಗಾಂಧಿ ಲೋಕಸಭಾ ಚುನಾವಣೆಗಳ ಮೊದಲು ಸತ್ತರೆ ರಾಜಕೀಯ ಅಸ್ಥಿರತೆ ಬರುವುದೇ ಅಥವಾ ನಂತರವೇ ಎಂಬ ಪ್ರಶ್ನೆಯನ್ನು ಪರಿಶೀಲಿಸಿದ ಈ ಗುಪ್ತ "ಅಧ್ಯಯನ" ಇಂದಿರಾಗಾಂಧಿಯವರ ಕೊಲೆಯ ಎಂಟು ವಾರಗಳ ಮೊದಲು ಅಮೆರಿಕಾದ ವಿದೇಶಾಂಗ ಇಲಾಖೆಯ ಕೈಸೇರಿತ್ತು !

○ ಕೆನಡಾದ ಟೊರಾಂಟೋ ವಿಮಾನ ನಿಲ್ದಾಣದಲ್ಲಿ ಏರ್-ಇಂಡಿಯಾದ ಬಿಗಿಯಾದ ತನಿಖೆ ವ್ಯವಸ್ಥೆಯಿದ್ದರೂ, ಕೆನಡಾದ ಅಶ್ವಾರೋಹೀ ಪೋಲೀಸ್ ದಳಕ್ಕೆ ಮೊದಲೇ ಎಲ್ಲಿಂದಲೋ ಸೂಚನೆ ಬಂದಿದ್ದರೂ ಏರ್ ಇಂಡಿಯಾದ ಎರಡು ವಿಮಾನಗಳಲ್ಲಿ ಬಾಂಬು ಇಡಲ್ಪಟ್ಟಿತು ! ಇವುಗಳಲ್ಲಿ ಒಂದು 329 ಅಮಾಯಕ ವಿಮಾನ ಯಾತ್ರಿಕರನ್ನು ಗಗನ ಮಧ್ಯವೇ ಕೊಂದರೆ, ಇನ್ನೊಂದು ಜಪಾನಿನ ನರಿತಾ ವಿಮಾನ ನಿಲ್ದಾಣದಲ್ಲಿ ಇಬ್ಬರು ಜಪಾನೀ ವಿಮಾನ ನಿಲ್ದಾಣ ಕಾರ್ಮಿಕರನ್ನು ಕೊಂದಿತು.

● ಏರ್ ಇಂಡಿಯಾದ "ಕನಿಷ್ಕ" ಬೋಯಿಂಗನ 329 ಪ್ರಯಾಣಿಕರನ್ನು ಕೊಂದ ಇಬ್ಬರು ಖಾಲಿಸ್ತಾನೀ ಉಗ್ರಗಾಮಿಗಳು ಈ ಭೀಕರ ಕೃತ್ಯಕ್ಕೆ ತರಬೇತಿ ಪಡೆದಿದ್ದು ಅಮೆರಿಕಾ ಸಂಯುಕ್ತ ಸಂಸ್ಥಾನದೊಳಗೆ ಇರುವ ಒಂದು ಭಯೋತ್ಪಾದನಾ ತರಬೇತಿ ಸಂಸ್ಥೆಯಲ್ಲಿ ಎಂದು ಕೆಲವೇ ದಿನಗಳ ನಂತರ "ನ್ಯೂಯಾರ್ಕ್ ಪೋಸ್ಟ್" ಪತ್ರಿಕೆಯ ಒಂದು ವರದಿಯಿಂದ ಬಯಲಾಯಿತು. ವಿಯೆಟ್ನಾಂ ಯುದ್ಧದಲ್ಲಿ ನಿಶ್ಶಸ್ತ್ರ ವಿಯೆಟ್ನಾಮಿಗಳ ವಿರುದ್ಧ ಘೋರ ಅನ್ಯಾಯದಲ್ಲಿ ಪಾಲುಗೊಂಡಿದ್ದ, ಮಾಜೀ ಸಿ. ಐ. ಎ. ಏಜೆಂಟ್ ಫ್ರಾಂಕ್ ಕ್ಯಾಂಪರ್ ಎಂಬಾತ ರೆಕೋಂಡೋ ಸ್ಕೂಲ್ ಎಂಬ ಶಾಲೆಯ ನಿರ್ದೇಶಕ, ಇಂತಹ ಇನ್ನೂ ಹಲವು ತರಬೇತಿ ಶಾಲೆಗಳು ಅಮೆರಿಕಾದಲ್ಲಿವೆಯಂತೆ. ಇವೆಲ್ಲದಕ್ಕೆ ಅಮೆರಿಕನ್ ಸೈನ್ಯ ವ್ಯವಸ್ಥೆಯ ಪೆಂಟಗನ್‌ನ ಬೆಂಬಲವಿದೆಯೆಂಬುದೂ ತಿಳಿದು ಬಂದಿದೆ. ಇಂತಹ ದುಷ್ಟ ಸಂಸ್ಥೆಗಳನ್ನು ಪ್ರತಿಬಂಧಿಸಲು ಅಮೆರಿಕನ್ ಕಾನೂನು ಸಂಹಿತೆಯ ಪ್ರಕಾರ ಅವಕಾಶವೇ ಇಲ್ಲವಂತೆ !

○ 1986ರ ಏಪ್ರಿಲ್ 29, ಸ್ವರ್ಣಮಂದಿರದಿಂದ "ಸ್ವತಂತ್ರ ಖಾಲಿಸ್ತಾನೀ ಪ್ರಭುತ್ವ"ದ "ಸರ್ಕಾರ"ದ ಘೋಷಣೆ ಮಾಡಿದ ಉಗ್ರಗಾಮಿಗಳು ಇದಕ್ಕೆ ಮಾನ್ಯತೆ ನೀಡಬೇಕೆಂದು ಹಾಗೂ ಮಿಲಿಟರಿ ಮತ್ತು ಆರ್ಥಿಕ ನೆರವು ನೀಡಬೇಕೆಂದು ತಕ್ಷಣ ಕೇಳಿಕೊಂಡದ್ದು ಕೇವಲ ಐದು ದೇಶಗಳ ಸರಕಾರಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನ, ಬ್ರಿಟನ್, ಪಶ್ಚಿಮ ಜರ್ಮನಿ, ಕೆನಡಾ ಮತ್ತು ಪಾಕೀಸ್ತಾನ !

○ ಸ್ವರ್ಣಮಂದಿರದಿಂದ ಹಾಗೂ ಸೆರೆಸಿಕ್ಕ ಭಯೋತ್ಪಾದಕರಿಂದ ಸಿಕ್ಕಿದ ಮದ್ದು–ಗುಂಡುಗಳೆಲ್ಲಾ ವಿದೇಶಿ ಮೂಲದವು. ಭಯೋತ್ಪಾದಕರಿಗೆ ಪಾಕಿಸ್ತಾನದಲ್ಲಿ ತರಬೇತಿ ನೀಡಲಾಗುತ್ತಿದೆ. ಇತರ ನಾಲ್ಕು ದೇಶಗಳಿಂದ ಹಣ ದೊರೆಯುತ್ತಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳು ಸೆರೆಸಿಕ್ಕ ಭಯೋತ್ಪಾದಕರ ವಿಚಾರಣೆಯ ಸಮಯದಲ್ಲಿ ಪಂಜಾಬ್ ಸರ್ಕಾರಕ್ಕೆ ಹಾಗೂ ಕೇಂದ್ರ ಸರ್ಕಾರಕ್ಕೆ ದೊರೆತಿವೆ

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ನಾಲ್ಕನೇ ವೇತನ ಆಯೋಗದ ವರದಿ-ಒಂದು ಪರ್ವತ ಪ್ರಸವ !

(2ನೇ ಪುಟದಿಂದ)

ಉನ್ನತ ಅಧಿಕಾರಿಗಳಿಗಿಂತಲೂ ಹೆಚ್ಚಾಗಿದೆ ! ರಾಜೀವಗಾಂಧಿಯು ಸರಕಾರದ ಒಲವು ಯಾರತ್ತ ಹೆಚ್ಚಾಗಿದೆ ಎಂದು ಸ್ಪಷ್ಟವಾಗುವುದು.

ಕೇಂದ್ರ ಸರಕಾರಿ ನೌಕರರ ವೇತನ ಶ್ರೇಣಿಯನ್ನು 153ರಿಂದ 3೬ಕ್ಕೆ ಇಳಿಸಿದ್ದರೂ, ಅದರ ಪೂರ್ಣ ಪ್ರಯೋಜನ ಪಡೆಯಲಾಗುವುದಿಲ್ಲ. ಪ್ರತಿ ಒಂದು ಸಂಬಳ ಶ್ರೇಣಿಯ ಅವಧಿಯನ್ನು ವಿಸ್ತರಿಸಲಾಗಿದೆ, ವಾರ್ಷಿಕ ಭತ್ತೆಯ ಮೊತ್ತವನ್ನು ಕಡಿಮೆ ಮಾಡಲಾಗಿದೆ. ಬೆಲೆ ಏರಿಕೆಗನುಗುಣವಾಗಿ ವರ್ಷಕ್ಕೆ ಎರಡು ಬಾರಿ ಮಾತ್ರ ಬೆಲೆ ಸೂಚಿ 608ಕ್ಕಿಂತ ಹೆಚ್ಚಾದ ಅಂಕಗಳ ಆಧಾರದಲ್ಲಿ ತುಟ್ಟಿ ಭತ್ತೆ ಪಡೆಯುವರು. ಇದರಿಂದಾಗಿ ಕೇಂದ್ರ ನೌಕರರು ಅಪಾರ ನಷ್ಟಕ್ಕೊಳಗಾಗುವರು. ಇಲ್ಲಿ ತನಕ ಕೆಲವೊಮ್ಮೆ ಒಂದೇ ತಿಂಗಳಲ್ಲಿ 3-4 ತುಟ್ಟಿ ಭತ್ತೆಯ ಕಂತುಗಳನ್ನು ಈ ನೌಕರರು ಪಡೆಯುತ್ತಿದ್ದರು. ಇನ್ನು ಮುಂದೆ ಈ ಅವಕಾಶವೂ ಇಲ್ಲ. ನಿವೃತ್ತಿ ವಯಸ್ಸನ್ನೂ 58 ರಿಂದ 60ಕ್ಕೆ ಏರಿಸಲು ಆಯೋಗ ನಿರಾಕರಿಸಿದೆ. ನೌಕರರ ಕೆಲಸದ ಅವಧಿಯನ್ನು ಹೆಚ್ಚಿಸಿ, ಹೊಸ ನೌಕರರ ಸೇರ್ಪಡೆಯ ಮತ್ತು ಕಂಪ್ಯೂಟರ್‌ಗಳನ್ನು ಬಳಸಿ ಅವರ ಮೇಲೆ ಹೆಚ್ಚಿನ ಶ್ರಮಭಾರ ಹೇರಲು ಆಯೋಗ ಸಲಹೆಮಾಡಿದೆ. ಮುಂದಿನ ಉದ್ಯೋಗ ಅವಕಾಶಗಳು ಕಡಿಮೆಯಾಗಿ ನೌಕರರ ಕುಟುಂಬಗಳು ಇನ್ನಷ್ಟು ದುರವಸ್ಥೆಗೊಳಗಾಗಬೇಕಾಗುವುದು. ವೇತನ ಹೆಚ್ಚಳದ ವೆಚ್ಚದ ಭಾರವನ್ನು ಅಪ್ರತ್ಯಕ್ಷವಾಗಿ ನೌಕರರ ಮೇಲೆಯೇ ಹೊಂಸಲಾಗುವುದು. ಮಹಿಳಾ ನೌಕರರಿಗೆ ಕೆಲವೊಂದು ಸವಲತ್ತುಗಳನ್ನು ಸೂಚಿಸಿದ್ದರೂ, ಎರಡಕ್ಕಿಂತ ಹೆಚ್ಚು ಮಕ್ಕಳಿರುವವರಿಗೆ 'ಹೆರಿಗೆರಜೆ' ಕೊಡಬಾರದೆಂದು ಆಯೋಗ ಸಲಹೆಮಾಡಿದೆ !

ವೇತನ ಪುನಃರಚನೆಕ್ಕೆ ಹಿಂದಿನ ಎರಡು ತಾತ್ಕಾಲಿಕ ಪರಿಹಾರಗಳ ಹೊರತಾಗಿ ಇನ್ನೂ ರೂ 1280 ಕೋಟಿ ವೆಚ್ಚ ಸರಕಾರಕ್ಕೆ ತಗಲುವುದೆಂದು ಹೇಳಲಾಗಿದೆ. ಇದು ಕೇವಲ ಉಪ್ಪೇಕ್ಷೆ. ಹೆಚ್ಚಿದ ವೇತನ ಬಹು ಪಾಲು ಸಂಚಾರಕ್ಕೆ ಮರಳಿ ಬರುವುದು ಕೆರಿಗೆ, ಉಳಿತಾಯ ವಿಧಾನಗಳಲ್ಲಿ ಹೆಚ್ಚುವರಿ ವೆಚ್ಚ ರೂ 750 ಕೋಟಿಗೆ ಮೀರಲಾರದು ಎಂದು ನೌಕರರ ಸಂಘಟನೆಗಳ ವಕ್ತಾರರು ಅಂದಾಜು ಮಾಡಿದ್ದಾರೆ 52 ಲಕ್ಷ ಜನರಿಗೆ ರೂ 750 ಕೋಟಿ ಎಂದರೆ ಸಿಬ್ಬಂದಿ ಸರಾಸರಿ ವರ್ಷಕ್ಕೆ ರೂ 125 ಅಷ್ಟೆ ! ಇತ್ತೀಚೆಗಿನ ವರ್ಷಗಳಲ್ಲಿ ಕೇಂದ್ರ ಸರಕಾರದ ವೇತನ ಖರ್ಚು ಹೆಚ್ಚುತ್ತಿದ್ದರೂ, ಅವರ ಒಟ್ಟು ಖರ್ಚಿಗೆ ಹೋಲಿಸಿ ನೋಡಿದರೆ ಪ್ರತಿಶತಕಡಿಮೆಯಾಗಿರುವುದನ್ನೂ ಗಮನಿಸಬಹುದು. ಉದಾ: 1961 ; ರೂ 417ಕೋಟಿ, ಒಟ್ಟು ವೆಚ್ಚದ ಶೇ 33.5. 1986 : ರೂ 4421 ಕೋಟಿ, ಒಟ್ಟು ವೆಚ್ಚದ ಶೇ 19.3 (ಇಂಡಿಯಾಟುಡೇ 31-7-86).

ರಾಷ್ಟ್ರೀಯ ವೇತನ ಧೋರಣೆ ಇಲ್ಲ

ಸ್ವಾತಂತ್ರ್ಯದ ನಂತರದ 39 ವರ್ಷಗಳಲ್ಲಿ ಆರು ಪಂಚ ವಾರ್ಷಿಕ ಯೋಜನೆ ಆಗಿ, ಏಳನೇ ಯೋಜನೆಯಲ್ಲಿ ಮುಂದುವರಿಯುತ್ತಿದ್ದರೂ, ಕಾಂಗ್ರೆಸ್ ಸರಕಾರ ರಾಷ್ಟ್ರೀಯ ವೇತನ ಧೋರಣೆಯನ್ನು ನಿರೂಪಿಸಲಿಲ್ಲ. ಕೆಳಮಟ್ಟದಲ್ಲಿ 1948ರ ಕನಿಷ್ಠ ವೇತನ ಶಾಸನದಂತಾದರೂ ಅಸಂಘಟಿತ ಕಾರ್ಮಿಕರಿಗೆ 'ಕನಿಷ್ಠ ವೇತನ' ಸಿಗುತ್ತಿಲ್ಲ. ಪರಿಣಾಮವಾಗಿ ದೇಶದ ಜನ ಸಂಖ್ಯೆಯ ಶೇ 40 ರಷ್ಟು ಇನ್ನೂ ಬಡತನ ರೇಖೆಯ ಕೆಳಗೇ ನರಳುತ್ತಿದ್ದಾರೆ. ಮಧ್ಯಮ ಮಟ್ಟದಲ್ಲಿ ಸಂಘಟಿತ ಕಾರ್ಮಿಕರಿಗೆ 'ಜೀವನಾವಶ್ಯಕ ಕನಿಷ್ಠ ಕೂಲಿ'ಯೂ ಇಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಮೇಲ್ಮಟ್ಟದಲ್ಲಿ ಖಾಸಗಿ, ಸಾರ್ವಜನಿಕ, ಸರಕಾರಿ ಉನ್ನತ ಅಧಿಕಾರಿಗಳ ಸಂಬಳ, ಸವಲತ್ತುಗಳು, ಪ್ರತ್ಯಕ್ಷ, ಪರೋಕ್ಷವಾಗಿ ದೊರಕುತ್ತಿರುವ ಪುಕ್ಕಟೆ ಸೌಕರ್ಯಗಳು, ಲಾಭದಲ್ಲಿ ಪಾಲುಗಾರಿಕೆ, ವಿದೇಶ ಪ್ರವಾಸ, ಭಾರೀ ಬಂಗಲೆಗಳು, ಗಣ್ಯ ಕ್ಲಬ್‌ಗಳ ಸದಸ್ಯತ್ವ, ಹವಾನಿಯಂತ್ರಣ ಸೌಕರ್ಯಗಳು, ಅತಿ ವೆಚ್ಚದ ಪಿಠೋಪಕರಣಗಳು, ರಜಾಪ್ರವಾಸ ಸೌಲಭ್ಯ ಬಡ್ಡಿ ರಹಿತ ಸಾಲಗಳು, ಕಂಪನಿ ಷೇರುಗಳಲ್ಲಿ ಪಾಲುಗಾರಿಕೆ, ಸೌಂದರ್ಯ ಸಾಧನಗಳು, ಉನ್ನತ ಮಟ್ಟದ ಸಭೆ-ಸಮ್ಮೇಳನಗಳು, ತರಬೇತಿಗಳು, ಕಾರುಗಳು, ಉದ್ಯಾನಗಳು ಖಾಸಗೀ ವಿಮಾನಗಳು, ತೆರಿಗೆ ತಪ್ಪಿಸುವ ಅವಕಾಶಗಳು, ಭ್ರಷ್ಟಾಚಾರದಿಂದ ಕಪ್ಪು ಹಣ ಸಂಗ್ರಹಿಸುವ ಸಾಧ್ಯತೆಗಳು, ಇತ್ಯಾದಿಗಳನ್ನು ಗಮನಿಸಿದರೆ, ದೇಶದ ಅಸಮಾನತೆಯು ಪ್ರತ್ಯಕ್ಷ ಕಾಣುವುದು. ಸಂಪನ್ಮೂಲ ಹೇಗೆ ಪೋಲಾಗುತ್ತಿದೆ ಎಂದು ಅರಿವಾಗುವುದು.

ಬಹುರಾಷ್ಟ್ರೀಯ ಸಂಸ್ಥೆಗಳು, ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳು ತಮ್ಮ ಉನ್ನತ ಅಧಿಕಾರಿಗಳಿಗೆ ಡೈರೆಕ್ಟರುಗಳಿಗೆ ವೇತನ ವೆಚ್ಚದ ಸಿಂಹಪಾಲನ್ನು ವಿನಿಯೋಗಿಸುವುವು. ಸಾರ್ವಜನಿಕ ಸಂಸ್ಥೆಗಳ ಮತ್ತು ಸರಕಾರಿ ಇಲಾಖೆಗಳ ಉನ್ನತ ಅಧಿಕಾರಿಗಳ ಸಂಬಳ ಸವಲತ್ತುಗಳು ಏರಿದಂತೆ, ಖಾಸಗೀ ಸ್ವದೇಶಿ-ವಿದೇಶಿ ಕಂಪನಿಗಳು ತಮ್ಮ ಉನ್ನತ ಅಧಿಕಾರಿಗಳ ಸಂಬಳ ಸವಲತ್ತುಗಳನ್ನು ಇನ್ನಷ್ಟೂ ಏರಿಸುವುವು. ಸರಕಾರಿ ಸಾರ್ವಜನಿಕ ಕ್ಷೇತ್ರದ ಅಧಿಕಾರಿಗಳು ಸದಾ ಖಾಸಗೀ ಉನ್ನತ ಅಧಿಕಾರ ಸ್ಥಾನಕ್ಕೆ ಸದಾ ಆಸೆ ಪಡುವಂತಿರಬೇಕು. ಅತ್ಯಂತ ಸಮರ್ಥರಾದವರು ಖಾಸಗೀ ರಂಗಕ್ಕೆ ಬರಬೇಕು ಎಂಬ ಉದ್ದೇಶ. ಒಂದೆಡೆ ನಿರುದ್ಯೋಗ, ಕೆಲಸದಿಂದ ಉಚ್ಚಾಟನೆ ಬೀಗಮುದ್ರೆ, ಇನ್ನೊಂದೆಡೆ ಕಂಪ್ಯೂಟರ್ಸ್, ಹೊಸ ತಂತ್ರಜ್ಞರಿಗೆ ಅತ್ಯಧಿಕ ಸಂಬಳ ಸವಲತ್ತುಗಳು.

ವೇತನದಲ್ಲಿ ಇಷ್ಟು ಅಸಮಾನತೆ ಇದ್ದಾಗ್ಯೂ, ಸರಕಾರ ರಾಷ್ಟ್ರೀಯ ವೇತನದ 'ಧೋರಣೆ ರೂಪಿಸಲು ನಿರಾಕರಿಸುತ್ತಿದೆ. ವೇತನ ಪರಿಷ್ಕರಣವು ಒಂದು ಕುರುಡು ನಿಯಮವಾಗಿದೆ. ಅರ್ಥಹೀನವಾಗಿದೆ. ಬಡ ನೌಕರರಿಗೆ ನ್ಯಾಯವಾಗಿ ಸಿಗಬೇಕಾದ ವೇತನ ಹೆಚ್ಚಳವನ್ನು ತಪ್ಪಿಸಲು, ಸ್ಥಾಪಿತ ಹಿತಾಸಕ್ತಿಗಳೂ, ಸರಕಾರವೂ ಸುಳ್ಳು ಪ್ರಚಾರಗಳನ್ನು ಮಾಡುತ್ತಿವೆ. ಕಾರ್ಮಿಕರ ಸಂಘಟಿತ ಹೋರಾಟ ಈ ಸವಾಲನ್ನೆದುರಿಸಬೇಕು.

●

ಬಿಜಾಪುರದಲ್ಲಿ ರಾಷ್ಟ್ರೀಯ ಸಮಗ್ರತಾ ಸಭೆ

ಬಿಜಾಪುರದಲ್ಲಿ ಐ. ಸಿ. ನಾಗಠಾಣ ಅವರ ಅಧ್ಯಕ್ಷತೆಯಲ್ಲಿ ನಡೆದ ಆಗಸ್ಟ 9ರ ರಾಷ್ಟ್ರೀಯ ಸಮಗ್ರತಾ ಸಭೆಯಲ್ಲಿ ಸಿ. ಪಿ. ಐ (ಎಂ) ಮುಖಂಡರಾದ ಎಸ್.ಕೆ. ಉಪಾಧ್ಯಾಯರು ಮುಖ್ಯ ಅತಿಥಿಗಳಾಗಿ ಭಾಷಣ ಮಾಡುತ್ತ ಸ್ವಾತಂತ್ರ್ಯ ಪೂರ್ವದ ಹಾಗೂ ಅನಂತರದ ದೇಶದ ಪರಿಸ್ಥಿತಿಯನ್ನು ವಿವರಿಸಿ ಆಗಸ್ಟ 9ರ ಚಲೇಜಾವ್ ಚಳುವಳಿ, ಆರ್.ಐ.ಎನ್ ದಂಗೆಗಳ ಮಹತ್ವ ಎತ್ತಿ ತೋರಿಸಿ, ಆಳುವ ಸರಕಾರದ ಆರ್ಥಿಕ-ರಾಜಕೀಯ ನೀತಿ ನಮ್ಮ ದೇಶದ ಸಮಗ್ರತೆಗೆ ಹೇಗೆ ಗಂಡಾಂತರಕಾರಿಯಾಗುತ್ತಿದೆ. ಮತೀಯ ಶಕ್ತಿಗಳಿಗೆ ಹೇಗೆ ಪ್ರಚೋದನೆ ನೀಡುತ್ತಿದೆಂಬುದನ್ನು ವಿವರಿಸಿ ದೇಶವನ್ನು ಅಭದ್ರಗೊಳಿಸುವ ನೀತಿಯ ವಿರುದ್ಧ ಜನರಲ್ಲಿ ಜಾಗೃತಿಯನ್ನುಂಟುಮಾಡಿ ಜಾತೀಯ ಸೌಹಾರ್ದತೆ ಮತ್ತು ದೇಶದ ಸಮಗ್ರತೆಗಾಗಿ ಐಕ್ಯವಾಗಿ ದುಡಿಯಬೇಕಾದ ಅವಶ್ಯಕತೆಯತ್ತ ಸಭಿಕರ ಗಮನ ಸೆಳೆದರು.

○

ನಿರುದ್ಯೋಗಕ್ಕೆದುರು ಪ್ರತಿಭಟನೆ

ಕುಂದಾಪುರ

ಸಿ ಐ ಟಿ ಯು ರಾಜ್ಯ ಸಮಿತಿ ಕರೆಯಂತೆ ಆಗಸ್ಟ 8 ರಂದು ಕುಂದಾಪುರದಲ್ಲಿ ನಿರುದ್ಯೋಗಿಗಳ ಪರವಾಗಿ ಬೇಡಿಕೆಗಳನ್ನು ಮುಂಡಿಸಿ ಉದ್ಯೋಗ ವಿನಿಮಯ ಕಚೇರಿಯೆದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದ ಬಗ್ಗೆ ವರದಿಯಾಗಿದೆ. ನಂತರ ನಡೆದ ಸಭೆಯಲ್ಲಿ ಸಿ ಐ ಟಿ ಯು ಮುಂದಾಳು ಕಾ. ಅಬ್ರಹಾಂ ಕರ್ಕಡ ಯುವಜನತೆಯನ್ನು ಕಿತ್ತು ತಿನ್ನುತ್ತಿರುವ ನಿರುದ್ಯೋಗದ ಸಮಸ್ಯೆಯನ್ನು ವಿವರಿಸಿದರು. ಕಾ.ಶಂಕರ್ ಖಾರ್ವೆ ಮತ್ತು ಕೆ. ವಿಶ್ವನಾಥ ಅವರುಗಳೂ ಸಹ ಸಭೆಯಲ್ಲಿ ಮಾತನಾಡಿದರು. ಇದೇ ಸಭೆಯಲ್ಲಿ ಮಾತನಾಡಿದ ಸಿ ಐ ಟಿ ಯು ಮುಖಂಡರಾದ ಕಾ. ಸಿ. ನಾರಾಯಣ ಮತ್ತು ಕಾ. ಕೆ. ಶಂಕರ್ ಅವರು ನಿರುದ್ಯೋಗಿ ಯುವಕ, ಯುವತಿಯರಿಗೆ 'ಉದ್ಯೋಗ' ಇಲ್ಲವೇ 'ನಿರುದ್ಯೋಗ ಭತ್ತೆ' ನೀಡುವುದು ಸರಕಾರದ ಮುಖ್ಯ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ನಿರುದ್ಯೋಗವನ್ನು ಹೆಚ್ಚಿಸುವ ಗಣಕೀಕರಣವನ್ನು ಕೂಡಲೇ ನಿಲ್ಲಿಸಬೇಕೆಂದು ಅವರು ಆಗ್ರಹ ಪಡಿಸಿದರು.

ದ. ಕ.

ದ. ಕ. ಸಿ ಐ ಟಿ ಯು ಜಿಲ್ಲಾ ಸಮಿತಿ ಆಗಸ್ಟ 8 ರಂದು ಉದ್ಯೋಗ ವಿನಿಮಯ ಕಚೇರಿಗಳ ಎದುರು ಪ್ರದರ್ಶನ ನಡೆಸಿ ಕೆ.ಆರ್.ಶ್ರೀಯಾನ್, ಕೆ. ಮೂಸಬ್ಬ, ಶಿವಾನಂದ ಕೋಡಿ, ಉಮೇಶ್ ಭಂಡಾರಿ, ಸುನಿಲ್ ನಟೇಕರ್, ನಾರಾಯಣ್, ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ದಾಂಡೇಲಿ

ಸಿ ಐ ಟಿ ಯು ರಾಜ್ಯ ಸಮಿತಿಯ ಕರೆಯ ಮೇರೆಗೆ ಆಗಸ್ಟ 8 ರಂದು ದಾಂಡೇಲಿಯಲ್ಲಿ ನಿರುದ್ಯೋಗ ವಿರೋಧಿ ದಿನಾಚರಣೆ ಆಚರಿಸಲಾಯಿತು. ಸಿಐಟಿಯು ಕಚೇರಿಯಿಂದ ಹೊರಟ ಮೆರವಣಿಗೆಯಲ್ಲಿ ಬಹು ಸಂಖ್ಯಾತ ನಿರುದ್ಯೋಗಿಗಳು, ದಾಂಡೇಲಿಯ ಯುವಕರು ಪಾಲ್ಗೊಂಡಿದ್ದರು ಉದ್ಯೋಗ ವಿನಿಮಯ ಕಚೇರಿ ಎದುರು ಒಂದು ಗಂಟೆ ಕಾಲ ಧರಣೆ ನಡೆಸಿ ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು ನಂತರ ಸಭೆಯನ್ನುದ್ದೇಶಿಸಿ ಕಾ. ಉಮೇಶ್ ನಾಯ್ಕ ಕಾ. ಅಕ್ರಮ್‌ಖಾನ್‌ರವರು ಮಾತನಾಡಿ ಸರಕಾರದ ಆರ್ಥಿಕ ನೀತಿ ಜನವಿರೋಧಿ ನೀತಿ ಹಾಗೂ ಕಂಪ್ಯೂಟರೀಕರಣವನ್ನು ಖಂಡಿಸಿದರು.

ಬಿಜಾಪುರ

ರಾಜ್ಯ ಸಿ ಐ ಟಿ ಯು ಕರೆಯ ಮೇರೆಗೆ ಬಿಜಾಪುರದಲ್ಲಿ ಆಗಸ್ಟ 8 ರಂದು ಹಲವಾರು ಯುವಕರು ವಿ.ಎಂ. ಸೊನ್ನದ ಅವರ ನೇತೃತ್ವದಲ್ಲಿ ಉದ್ಯೋಗ ವಿನಿಮಯ ಕೇಂದ್ರದ ಮುಂದೆ ಮತ ಪ್ರದರ್ಶನ ನಡೆಸಿದರು. ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ತೆ ಸಿಗಲಿ, ಉದ್ಯೋಗ ವಿನಿಮಯ ಕೇಂದ್ರಗಳಲ್ಲಿಯ ಭ್ರಷ್ಟಾಚಾರ ನಿಲ್ಲಲಿ, ಆಧುನೀಕರಣದ ಹೆಸರಿನಲ್ಲಿ ಉದ್ಯೋಗದ ಅವಕಾಶ ಕಡಿತಕ್ಕೆ ಧಿಕ್ಕಾರ ಮೊದಲಾದ ಘೋಷಣೆಗಳು ಜನರನ್ನು ಆಕರ್ಷಿಸಿದವು.

ವಿದ್ಯಾರ್ಥಿ ಯುವಜನರ ಸೈಕಲ್ ಜಾತಾ

ದಿನಾಂಕ 30-7-86 ರಂದು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನಿಂದ, ರಾಂಪುರದವರೆಗೆ ಡಿ ವೈ ಎಫ್ ಐ ನ ಎಂ. ಜಿ. ಗಂಗಾಧರ್ ನೇತೃತ್ವದಲ್ಲಿ ಎಸ್ ಎಫ್ ಐ ಮತ್ತು ಡಿ ವೈ ಎಫ್ ಐ ಕಾರ್ಯಕರ್ತರು ಮೂವತ್ತು ಕಿಲೋ ಮೀಟರ್ ಸೈಕಲ್ ಜಾತಾ ನಡೆಸಿದರು

ರಾಂಪುರಕ್ಕೆ ತತ್‌ಕ್ಷಣವೇ ಹಾಸ್ಟೆಲ್ ಸೌಲಭ್ಯ ಒದಗಿಸುವಂತೆ ನಡೆಸಲಾದ ಈ ಸೈಕಲ್ ಜಾತಾದಲ್ಲಿ 300 ಮಂದಿ ಭಾಗವಹಿಸಿದ್ದರಲ್ಲದೆ ಆ ದಿನ ಮೊಳಕಾಲ್ಮೂರಿನ ಶಾಲಾ ಕಾಲೇಜುಗಳು ಬಂದಾಗಿದ್ದು ಜಾತಾದ ನಂತರ ಬೃಹತ್ ಮೆರವಣಿಗೆ ನಡೆಸಲಾಯಿತು.

ಕ್ರಿಯಾ ಪ್ರಕಾಶನಕ್ಕೆ ವಾರದ ರಜಾ ದಿನ - ಭಾನುವಾರ

ಕ್ರಿಯಾ ಪ್ರಕಾಶನಕ್ಕೆ ಇನ್ನು ಮುಂದೆ ಸೋಮವಾರಕ್ಕೆ ಬದಲಾಗಿ ಭಾನುವಾರ ವಾರದ ಬಿಡುವಿನ ದಿನವಾಗಿರುತ್ತದೆ.

— ವ್ಯವಸ್ಥಾಪಕ

ಮಾನವತಾವಾದಿ ಟಾಗೋರ್

ಮಹಾನ್ ಕವಿ ರವೀಂದ್ರನಾಥ ಟಾಗೋರರ 125 ನೇ ಹುಟ್ಟು ಹಬ್ಬವನ್ನು ಅಪಾರ ಉತ್ಸಾಹದೊಂದಿಗೆ ದೇಶದಾದ್ಯಂತ ಮಾತ್ರವಲ್ಲ ಹೊರನಾಡುಗಳಲ್ಲಿಯೂ, ಅದರಲ್ಲೂ ಮುಖ್ಯವಾಗಿ ಸಮಾಜವಾದೀ ದೇಶಗಳಲ್ಲಿ ಆಚರಿಸಲಾಯಿತು. ಜನತೆಯ ನಡುವಿನಿಂದ ಹೊಸ ಆಶೆಯ ಸಂದೇಶದೊಂದಿಗೆ ಹುಟ್ಟುವ ಹೊಸ ನಾಯಕತ್ವಕ್ಕಾಗಿ ಕಾಯುತ್ತಿರುವುದಾಗಿ ಬರೆದ ಮಾನವತಾವಾದಿ ರವೀಂದ್ರನಾಥ ಟಾಗೋರರು.

ಟಾಗೋರರು ತಮ್ಮ ಕಾಲದ ಇತರ ಮುಖಂಡರಂತಲ್ಲದೆ ತಮ್ಮ ದೇಶಪ್ರೇಮಕ್ಕೆ ಅಂತರ್ರಾಷ್ಟ್ರೀಯ ಸ್ವರೂಪ ನೀಡುತ್ತಿದ್ದರೇ ಹೊರತು ಅದು ಸಂಕುಚಿತ ರಾಷ್ಟ್ರೀಯ ಭಾವನೆಯದಾಗಿರಲಿಲ್ಲ. ಆದ್ದರಿಂದಲೇ ಅವರಲ್ಲಿ ಮೂಲಭೂತಆದರ್ಶವಾದೀ ಜಾಗತಿಕ ದೃಷ್ಟಿ ಕೋನಕ್ಕೆ, ಬದಲಾಗಿ ಆಧ್ಯಾತ್ಮಿಕ ಪ್ರಭಾವದ ಶಿಥಿಲತೆಯನ್ನು ಅವರ ಬದುಕಿನ ಅಂತಿಮ ಹಂತದಲ್ಲಿ ಕಾಣಬಹುದಾಗಿದೆ. ಈ ಹಂತದಲ್ಲೇ ಅವರು ಇಡೀ ಜಗತ್ತು ರಕ್ತಪಾತದಲ್ಲಿ ಮುಳುಗಿರುವಾಗ "ಪ್ರೇಮದ ದೂತರ" ಮೂಲಕ ಸಂತೋಷ, ತೃಪ್ತಿಗಳನ್ನು ಬೋಧಿಸುವ "ದೇವರಿಗೆ" ಕೂಡ ಸವಾಲು ಹಾಕುತ್ತಾರೆ.

ಸಾಮಾಜಿಕ ತುಳಿತದ ಅರಿವು ಟಾಗೋರರಿಗೆ ಉಂಟಾದದ್ದು ಹದಿಹರೆಯದಲ್ಲಿ ಪಶ್ಚಿಮ ದೇಶಗಳಿಗೆ ಇತ್ತ ಮೊದಲ ಭೇಟಿಯಲ್ಲಿ. ಓರ್ವ ಭೂಮಾಲಕರಾಗಿ ರೈತಾಪಿ ವರ್ಗದ ದಾರುಣ ಜೀವನವನ್ನು, ಪಾಳೆಯಗಾರಿಕೆಯ ಸವೆತವನ್ನು ಕಣ್ಣಾರೆ ಕಂಡಾಗ ಈ ಅರಿವು ಇನ್ನೂ ಹೆಚ್ಚು ಸ್ಪಷ್ಟವಾಗುತ್ತಾ ಹೋಯಿತು. ಈ ಬಗ್ಗೆ ಟಾಗೋರರೇ ಅನೇಕ ಸಂದರ್ಭಗಳಲ್ಲಿ ತಮ್ಮ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಅರಿವು ಇದ್ದಾಗ್ಯೂ ಕೂಡ ಸಾಮಾಜಿಕ-ರಾಜಕೀಯ ಚಳವಳಿಗಳಲ್ಲಿ ಅವರ ಪಾತ್ರ ಪರೋಕ್ಷವಾಗಿತ್ತು; ಸ್ವದೇಶಿ ಚಳವಳಿ ಸಮರಶೀಲ ಸ್ವರೂಪವನ್ನು ಪಡೆದುಕೊಳ್ಳುತ್ತಿದ್ದಾಗ ಟಾಗೋರರು ಅದರಿಂದ ದೂರಸರಿದರು ಮತ್ತು ಅಸಹಕಾರ ಚಳವಳಿಯನ್ನು ವಿರೋಧಿಸಿದರು. ಬ್ರಿಟಿಶ್ ಚಕ್ರಾಧಿಪತ್ಯ ಅವರಿಗೆ1911 ರಲ್ಲಿಸರ್ ಪದವಿಯನ್ನು ನೀಡಿತು.ಆದರೆ ಜಲಿಯನ್‌ವಾಲಾಭಾಗ್ ಹತ್ಯಾಕಾಂಡವನ್ನು ಪ್ರತಿಭಟಿಸಿ ಅವರು ಆ ಪದವಿಯನ್ನು ತಿರಸ್ಕರಿಸಿದರು.

ಸಾಮ್ರಾಜ್ಯಶಾಹಿಗೆ ವಿರೋಧ

ಟಾಗೋರರ "ಗೀತಾಂಜಲಿ' ಯ ಇಂಗ್ಲಿಷ್ ಅನುವಾದಕ್ಕೆ 1913ರಲ್ಲಿ ಸಾಹಿತ್ಯದ ನೋಬಲ್ ಪ್ರಶಸ್ತಿ ದೊರೆತಾಗ ಟಾಗೋರ್ ಅಂತರ್ರಾಷ್ಟ್ರೀಯ ಖ್ಯಾತಿ ಪಡೆದುಕೊಂಡರು, ಮತ್ತು ಅವರು ಸಂಪೂರ್ಣವಾಗಿ ಸಾಮ್ರಾಜ್ಯಶಾಹೀ ವಿರೋಧಿ ನಿಲುವನ್ನು ಪ್ರತಿಪಾದಿಸಿದರು. ವಸಾಹತುಗಳ ಮೇಲಿನ ಹಿಡಿತಕ್ಕಾಗಿ ಸಾಮ್ರಾಜ್ಯಶಾಹಿಗಳ ನಡುವೆ ಏರ್ಪಟ್ಟ ಸ್ಪರ್ಧೆಯೇ ಮೊದಲನೇ ಜಾಗತಿಕ ಯುದ್ಧಕ್ಕೆ ಕಾರಣವೆಂಬುದನ್ನು ಸತರ್ಕವಾಗಿ ಅಂದಾಜು ಮಾಡಿದರು. 1916ರಲ್ಲಿ ಅವರು ಜಪಾನ್ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ತಾವು ಆ ದೇಶದ ಅತಿಥಿಯಾಗಿದ್ದೂ ಕೂಡ ಅಲ್ಲಿನ ರಾಷ್ಟ್ರೀಯ ಹಾಗೂ ಬಂಡವಾಳಶಾಹಿ ಹೋರಾಟಗಳನ್ನು ಟೀಕಿಸಿದರು.

ವೈಜ್ಞಾನಿಕ ಪ್ರಗತಿಯಲ್ಲಿ ಟಾಗೋರರು ಇರಿಸಿದ್ದ ದೃಢವಾದ ನಂಬಿಕೆಯಿಂದಲೇ ಅವರು ಅವೈಚಾರಿಕತೆಯ, ಅಂಧಶ್ರದ್ಧೆಯ ಹಾಗೆಯೇ ಗಾಂಧೀವಾದದ ವಿರೋಧಿಯಾಗಿದ್ದರು. ಅವರು ವೈಜ್ಞಾನಿಕ ಪ್ರಗತಿಯನ್ನು ಪ್ರತಿಪಾದಿಸಿದಂತೆಯ ಮನುಷ್ಯ, ಮನುಷ್ಯರ ನಡುವಿನ ಅಮಾನವೀಯತೆಯ ಮೂಲವಾದ ಬಂಡವಾಳಶಾಹಿಗಳ ಲಾಭದ ಗುರಿಯನ್ನು ಸಹ ಕಟುವಾಗಿ ಖಂಡಿಸಿದ್ದರು.

ಟಾಗೋರರು ಓರ್ವ ಕ್ರಾಂತಿಕಾರಿಯಾಗಿರದಿದ್ದರೂ ಕೂಡ ಅವರ 'ರಥ ರಶಿ' ಎಂಬ ನಾಟಕದಲ್ಲಿ ಮಾನವನ ಪ್ರಗತಿಯಲ್ಲಿ ನಿರ್ಣಾಯಕ ಪಾತ್ರ ಕಾರ್ಮಿಕ ವರ್ಗದ್ದು ಎಂಬುದನ್ನು ಒಪ್ಪಿಕೊಂಡಿರುವುದನ್ನು ನಾವು ಗುರುತಿಸಬೇಕಾಗಿದೆ.

ಕಾರ್ಮಿಕರ ಪ್ರಭುತ್ವದ ಪ್ರಭಾವ

ಈ ಪರಿವರ್ತನೆ ಹೇಗಾಯಿತು ? ಟಾಗೋರರು ಮೇಲೆ ತಿಳಿಸಿದ ನಾಟಕ ಕೃತಿಯನ್ನು ಬರೆದದ್ದು 1932ರಲ್ಲಿ ಅಂದರೆ ಚರಿತ್ರೆಯ ಪ್ರಥಮ ಕಾರ್ಮಿಕ ವರ್ಗದ ಪ್ರಭುತ್ವವಾದ ಸೋವಿಯತ್ ಯೂನಿಯನ್‌ಗೆ ಭೇಟಿ ನೀಡಿದ ಒಂದು ವರ್ಷದ ನಂತರ. ಸೋವಿಯತ್ ಜನತೆಯ ಸಾಧನೆಗಳು ಟಾಗೋರರ ಮೇಲೆ ಉಂಟುಮಾಡಿದ ಪ್ರಭಾವ ಟಾಗೋರರೇ 'ರಷ್ಯದಿಂದ ಪತ್ರಗಳು' ಎಂಬ ಕೃತಿಯ ಸುಂದರ ಶಬ್ದಗಳಲ್ಲಿ ದಾಖಲಾಗಿದೆ. ಟಾಗೋರರು ಮೊಟ್ಟ ಮೊದಲ ಬಾರಿಗೆ ಚರಿತ್ರೆಯನ್ನು ಪರಿವರ್ತಿಸ ಬಲ್ಲಂತಹ ಜನತೆಯ ಮಹಾನ್ ಶಕ್ತಿಯನ್ನು ಹಾದಿ ಕಾಣದೆ ಉಳಿದ ಟಾಗೋರರ ತನ್ನ ಕನಸುಗಳನ್ನೆಲ್ಲಾ ನನಸಾಗಿಸಿದ ಮಹಾನ್ ಚೈತನ್ಯವನ್ನು ರಷ್ಯದಲ್ಲಿ ಕಂಡರು. ವರ್ಗ ಸಂಘರ್ಷವನ್ನು ಒಂದು ಸಾಧನವನ್ನಾಗಿ ಈ ಕವಿ ಗುರುತಿಸದೇಹೋಗಿದ್ದರೂ ಕೂಡ ದಬ್ಬಾಳಿಕೆಯಿಲ್ಲದ ಒಂದು ಸಮಾಜ ಉದಯವಾದದ್ದನ್ನು ಗುರುತಿಸುವಲ್ಲಿ ಅವರು ವಿಫಲರಾಗಲಿಲ್ಲ. ಅಲ್ಲದೆ ಅದನ್ನು ಅವರು ನಿರ್ಭೀತರಾಗಿ ಜಗತ್ತಿಗೆ ಸಾರಿ ಹೇಳಿದರು,

"ನಾಗರಿಕತೆಯ ಬಿಕ್ಕಟ್ಟು"

ಟಾಗೋರರ ಜೀವನದ ಅಂತಿಮ ಘಟ್ಟದಲ್ಲಿ ಯುದ್ಧ ಮತ್ತು ಫ್ಯಾಸಿಸಂನ ವರ್ಧಿಸುತ್ತಿದ್ದ ಅಪಾಯ ಅವರನ್ನು ತೀವ್ರ ಕಳವಳಕ್ಕೆ ನೂಕಿತು, ಮೊದಲು ಅವರು ಫ್ಯಾಸಿಸ್ಟರಿಂದ ಮೋಸ ಹೋಗಿ ಅವರನ್ನು ಅಭಿನಂದಿಸಿ ಬರೆದಿದ್ದು ನಿಜವಾದರೂ ಸಹ ಟಾಗೋರರು ತಮ್ಮ ತಪ್ಪನ್ನು ಕೂಡಲೇ ಅರಿತುಕೊಂಡು ತಮ್ಮ ಅಭಿಪ್ರಾಯವನ್ನು ಹಿಂತೆಗೆದುಕೊಂಡು ಫ್ಯಾಸಿಸಂ ಅನ್ನು ಖಂಡಿಸಿದರು. ರಷ್ಯಾದಲ್ಲಿನ ಅವರ ಅನುಭವಗಳು ಜನತೆ ಸಾಗಬೇಕಾದ ಹಾದಿಯನ್ನು ತೋರಿಸಿ ಕೊಟ್ಟಿತು. ಫ್ಯಾಸಿಸಂ ಇಂಥ ಹಾದಿಗೆ ಕಡು ವೈರಿಯಾಗಿ ನಿಂತಿರುವುದು ಅವರ ಅರಿವಿಗೆ ಬಂದಿತು, ಇದು ಅವರನ್ನು ರಲಾಬಾರ್ಬುಸ್ ಫ್ಯಾಸಿಸ್ಟ್ ವಿರೋಧೀ ಮನವಿಗೆ ಸಹಿ ಹಾಕುವಂತೆ ಪ್ರೇರೇಪಿಸಿತು; "ಲೀಗ್ ಎಗ್ವೆನಿಸ್ಟ್ ಫ್ಯಾಸಿಸಂ ಅಂಡ್ ವಾರ್"ನ ಪ್ರಥಮ ಅಖಿಲ ಭಾರತ ಸಮಿತಿಯ ಅಧ್ಯಕ್ಷತೆ ವಹಿಸುವಂತೆ ಮಾಡಿತು. ಅಲ್ಲದೆ ಸ್ಪೇನ್, ಚೀನಾ, ಅಬಿಸೀನಿಯಾ, ಮತ್ತು ಜೆಕೊಸ್ಲಾವಾಕಿಯಾಗಳ ಮೇಲೆ ನಡೆದ ಆಕ್ರಮಣಗಳ ವಿರುದ್ಧ ಅನೇಕ ಲೇಖನಗಳನ್ನು, ಮನವಿಗಳನ್ನು ಮತ್ತು ಕವನಗಳನ್ನು ಬರೆದರು. ಇವು ಟಾಗೋರರ ಶಕ್ತಿಯುತ ಸಾಮ್ರಾಜ್ಯಶಾಹೀ ವಿರೋಧೀ ಬರಹದ ಘಟ್ಟವಾಗಿತ್ತು. ತಮ್ಮ 'ತಪೋ ಭೂಮಿ' ಎಂದು ಭಾವಿಸಿದ್ದ ಸೋವಿಯತ್ ಯೂನಿಯನ್ ಮೇಲೆ ಫ್ಯಾಸಿಸ್ಟರು ಆಕ್ರಮಣ ನಡೆಸಿದಾಗ ಟಾಗೋರರು ಅತೀವ ವೇದನೆಯನ್ನು ಅನುಭವಿಸಿದರು. ಆದರೆ ಅವರು ತಮ್ಮ ಆಶಾಭಾವನೆಯನ್ನು ಕಳೆದುಕೊಳ್ಳಲಿಲ್ಲ. ಟಾಗೋರರು ಸಾಯುವ ಕೆಲವೇ ವಾರಗಳ ಮೊದಲು ಸಾಮ್ರಾಜ್ಯಶಾಹಿಯ ವಿರುದ್ಧ ಬರೆದ ತಮ್ಮ 'ನಾಗರೀಕತೆಯ ಬಿಕ್ಕಟ್ಟು' ಎಂಬ ಕೃತಿಯಲ್ಲಿ ಹೀಗೆ ಬರೆದಿದ್ದಾರೆ: "ಮಾನವನಲ್ಲಿ ನಂಬಿಕೆಯನ್ನು ಕಳೆದು ಕೊಳ್ಳುವುದು ಒಂದು ಪಾಪ............ಒಂದು ದಿನ ಮನುಜಕುಲ ಅಖಂಡ ಚೈತನ್ಯದಿಂದ ಸಜ್ಜಿತರಾಗಿ ತಮ್ಮ ಕಳೆದು ಹೋದ ಪ್ರತಿಷ್ಠೆಯನ್ನು ಮರಳಿ ಪಡೆಯಲು ಹೋರಾಟ ನಡೆಸುತ್ತಾರೆ" ಟಾಗೋರರು ಆಗಸ್ಟ್ 7, 1941 ರಂದು ಕೊನೆಯುಸಿರೆಳೆದರು, ತಮ್ಮ ಬದುಕಿನ ಕೊನೆಯ ಕ್ಷಣದವರೆಗೆ ಅವರು ಸೋವಿಯತ್ ಗೆಲುವಿನ ಸುದ್ದಿಗಾಗಿ ಕಾಯುತ್ತಿದ್ದರು ಮತ್ತು ಸೋವಿಯತ್ ಪಡೆಗಳು ಗೆದ್ದೇ ತೀರುತ್ತವೆಂಬ ವಿಶ್ವಾಸವನ್ನು ಹಾಗೂ ಸೋವಿಯತ್ ಪಡೆಗಳು ಮಾತ್ರವೇ ಫ್ಯಾಸಿಸಂ ಅನ್ನು ತಡೆಯಲು ಶಕ್ತ ಎಂದು ಹೇಳುತ್ತಿದ್ದರು. ಅವರ ಅಭಿಪ್ರಾಯ ಸರಿಯಾದುದೆಂಬುದನ್ನು ಇತಿಹಾಸ ನಿರೂಪಿಸಿತು.

ರವೀಂದ್ರನಾಥ ಟಾಗೋರರು ಭಾರತೀಯ ಪುನರುಜ್ಜೀವನದ ಉನ್ನತ ವ್ಯಕ್ತಿಯಾಗಿದ್ದರು. ಅವರ ಸಾಧನೆಗಳು ಮತ್ತು ವೈಫಲ್ಯಗಳು ಆ ಕಾಲದ ಸಾಮಾಜಿಕ ಸ್ಥಿತಿಗೆ ಕೊಡುಗೆಗಳನ್ನು ನೀಡಿದವು. ಅವರು ತಮ್ಮ ಕೊನೆಯ ದಿನಗಳಲ್ಲಿ ಅವರ ವೈಫಲ್ಯಗಳ ಬಗ್ಗೆ ಮುಖ್ಯವಾಗಿ ಜನತೆಯಿಂದ ತಾವು ಪ್ರತ್ಯೇಕವಾಗಿದ್ದ ಬಗ್ಗೆ ಆತ್ಮವಿಮರ್ಶೆ ಮಾಡಿಕೊಂಡಿದ್ದಾರೆ. ಈ ಜನತೆಯ ನಡುವಿನಿಂದ ಹೊಸ ಆಶೆಯ ಸಂದೇಶದೊಂದಿಗೆ ಹುಟ್ಟುವ ಹೊಸ ನಾಯಕತ್ವಕ್ಕಾಗಿಕಾಯುತ್ತಿರುವುದಾಗಿ ಅವರು ಬರೆದಿದ್ದಾರೆ.

ಹೇಳಿದ್ದು;ಕೇಳಿದ್ದು

○ ಅಮೇರಿಕದ ಶ್ವೇತ ಭವನದಲ್ಲಿ ತನಗೊಬ್ಬ ತುಂಬಾ ಒಳ್ಳೆಯ ಸಾರ್ವಜನಿಕ ಸಂಪರ್ಕಾಧಿಕಾರಿ (ರೀಗನ್) ಇರುವುದು ದಕ್ಷಿಣ ಆಫ್ರಿಕದ ಬೋಥಾಗೆ ಅತೀವ ಆನಂದವುಂಟು ಮಾಡಿದೆ.

(ಅಮೇರಿಕದ ಅಧ್ಯಕ್ಷರು ದ ಆಫ್ರಿಕದ ರಾಕ್ಷಸ ಸರಕಾರದ ವರ್ಣಭೇಧ ನೀತಿಯನ್ನು ಸಮರ್ಥಿಸುವ ಮಾತನಾಡಿದಾಗ)

—ಬಿಷಪ್ ಡೆಸ್ಮಂಡ್ ಟುಟು.
(ನೋಬೆಲ್ ಶಾಂತಿ ಪಾರಿತೋಷಕ ವಿಜೇತ)

○ ಅಮೇರಿಕಾ ಸಂಯುಕ್ತ ಸಂಸ್ಥಾನವು ಜಗತ್ತಿನ ಮುಗ್ಧ ಜನರ ಪಾಲಿನ ವಿಶ್ವಾಸಾರ್ಹ ಮತ್ತು ಕೊಟ್ಟ ಕೊನೆಯ ಆಶಾಕಿರಣವಾಗಿ ಈಗೇನೂ ಉಳಿದಿಲ್ಲ. ಆದೀಗ ವರ್ಣಭೇದ ನೀತಿಯ ಕೊನೆಯ ಆಶಾಕಿರಣವಾಗಿದೆ.

—ಎಡ್ವರ್ಡ್ ಕೆನ್ನಡಿ

● ಅಮೇರಿಕ ಸಂ. ಸಂ. ಮತ್ತು ದ. ಆಫ್ರಿಕದ ನಡುವೆ 1960 ರಲ್ಲಿ ನಡೆದ ಒಂದು ಗುಪ್ತಚಾರ ಒಪ್ಪಂದಕ್ಕೆ ಅನುಗುಣವಾಗಿ ಅಮೇರಿಕವು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ಸಿನ ಚಟುವಟಿಕೆಗಳ ಕುರಿತು 1980 ರ ದಶಕದ ಮಧ್ಯದವರೆಗೂ ರಹಸ್ಯ ಮಾಹಿತಿಗಳನ್ನು ದ. ಆಫ್ರಿಕಾ ಸರಕಾರಕ್ಕೆ ನೀಡಿದೆ.....ಇದಕ್ಕೆ ಪ್ರತಿಯಾಗಿ ದಕ್ಷಿಣ ಆಫ್ರಿಕವೂ ಆಫ್ರಿಕಾ ಖಂಡದಲ್ಲಿ ಸೋವಿಯತ್ ಮತ್ತು ಕ್ಯೂಬಾದ ಚಟುವಟಿಕೆಗಳ ಕುರಿತು ಅಮೇರಿಕಕ್ಕೆ ರಹಸ್ಯ ಮಾಹಿತಿ ಒದಗಿಸಿದೆ.

—ನ್ಯೂಯಾರ್ಕ್ ಟೈಮ್ಸ್, ಜುಲೈ 23

ಬೀಡಿ ಕಾರ್ಮಿಕರ ಪ್ರತಿಭಟನೆ

ಮಂಗಳೂರು

ಬೀಡಿಕಾರ್ಮಿಕರಕನಿಸ್ಠ ಕೂಲಿಯನ್ನು ನಿಗದಿಗೊಳಿಸುವಲ್ಲಿ ಸರ್ಕಾರ ಮಾಡಿರುವ ದ್ರೋಹವನ್ನು ಪ್ರತಿಭಟಿಸಿ ಆಗಸ್ಟ್ 14 ರಂದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸಾವಿರಾರು ಬೀಡಿ ಕಾರ್ಮಿಕರು ತಮ್ಮ ಪ್ರತಿಭಟನೆಯನ್ನು ಸಲ್ಲಿಸಿರುವುದಕ್ಕೆ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ತನ್ನ ಅಭಿನಂದನೆಯನ್ನು ವ್ಯಕ್ತಪಡಿಸಿದೆ.

ಮಂಗಳೂರಿನಲ್ಲಿ ಆಗಸ್ಟ್ 14 ರಂದು ಸಾವಿರಾರು ಬೀಡಿ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ದ. ಕನ್ನಡ ಜಿಲ್ಲಾ ಡೆಪ್ಯೂಟಿ ಕಮಿಷನರ್ ರವರ ಮುಖಾಂತರ ರಾಜ್ಯದ ಕಾರ್ಮಿಕ ಸಚಿವರಿಗೆ ಮನವಿ ಸಲ್ಲಿಸಿದರು. ಇವರ ನೇತೃತ್ವವನ್ನು ಸಿ ಐ ಟಿ ಯು ರಾಜ್ಯ ಕಾರ್ಯದರ್ಶಿ ಕಾ. ಮೂಸಬ್ಬ, ಮತ್ತು ಫೆಡರೇಶನ್ ಕಾರ್ಯದರ್ಶಿ ಕಾ, ಯು.ಬಿ. ಲೋಕಯ್ಯ ಅವರುಗಳು ವಹಿಸಿದ್ದರೆಂದು ಪತ್ರಿಕಾ ಹೇಳಿಕೆ ತಿಳಿಸಿದೆ.

ಉಡುಪಿ

ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿರ್ಣಯಿಸುವಾಗ ಸರ್ಕಾರ ಮಾಡಿರುವ ದ್ರೋಹವನ್ನು ಪ್ರತಿಭಟಿಸಿ ಉಡುಪಿ ತಾಲೂಕಿನ ಸಿ. ಐ. ಟಿ. ಯು ಗೆ ಸೇರಿದ ಬೀಡಿ ಕಾರ್ಮಿಕರು ಆಗಸ್ಟ್ 14 ರಂದು. ಭಾರತ್ ಬೀಡಿ ಡಿಪೋ ಮತ್ತು ಗಣೇಶ ಬೀಡಿ ಡಿಪೋಗಳ ಮುಂದೆ ಪ್ರದರ್ಶನ ನಡೆಸಿರುವುದಾಗಿ ವರದಿಯಾಗಿದೆ.

ಬೀಡಿ ಕಾರ್ಮಿಕರಿಗೆ ವಾರದಲ್ಲಿ ಕೇವಲ 3-4 ದಿನ ಮಾತ್ರ ಕೆಲಸ ಕೊಡುತ್ತಿರುವುದನ್ನು ಮಾಲೀಕರುರ, ಕಾರ್ಮಿಕರ ಮತ್ತು ಸರಕಾರದ ಪ್ರತಿನಿಧಿಗಳಿಂದ ಕೂಡಿದ ಸಲಹಾ ಸಮಿತಿಯು ಸರ್ವಾನುಮತದಿಂದ ನಿಗದಿಗೊಳಿಸಿದ್ದ ಕನಿಷ್ಠ ಕೂಲಿಯನ್ನು ಧಿಕ್ಕರಿಸಿ ಈಗಿನ ಕೂಲಿಗಿಂತಲೂ ಕಡಮೆ ಕೂಲಿಯನ್ನು ಪ್ರಕಟಿಸಿದ ಸರ್ಕಾರದ ನೀತಿಯನ್ನು ಬೀಡಿ ಕಾರ್ಮಿಕರು ತೀವ್ರವಾಗಿ ಪ್ರತಿಭಟಿಸಿದ್ದಾರೆಂದೂ ಈ ಪ್ರದರ್ಶನದ ನೇತೃತ್ವವನ್ನು ಕಾ. ಪಿ. ವಿಶ್ವನಾಥ್, ಸಾಧು ಅಮೀನ್, ದೋಗು ಸುವರ್ಣ ,ರಾಮಸೇರಿಗಾರ ಜಾನಕಿಶೆಟ್ಟಿ, ಬೇಬಿ, ಗುರುವ ಪೂಜಾರಿ ಮೊದಲಾದವರು ವಹಿಸಿದ್ದರೆಂದು ವರದಿಯಾಗಿದೆ.

ಅದೇ ದಿನ ಕಾಪು ಪ್ರದೇಶ ಬೀಡಿ ಕೆಲಸಗಾರರ ಸಂಘವೂ ಸಹ ಪ್ರತಿಭಟನಾ ಪ್ರದರ್ಶನ ನಡೆಸಿದೆಯೆಂದು ತಿಳಿದು ಬಂದಿದೆ.

ಬಂಟ್ವಾಳ

ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ನಿಗದಿಯಲ್ಲಿ ಆಗಿರುವ ವಂಚನೆಯನ್ನು ವಿರೋಧಿಸಿ ಬಂಟ್ವಾಳ ತಾಲೊಕಿನ ಬೀಡಿ ಕಾರ್ಮಿಕರರು ಆಗಸ್ಟ್ 14 ರಂದು ಬಂಟ್ವಾಳದ ತಹಸಿಲ್ದಾರ್ ಕಚೇರಿಯೆದುರು ಬೃಹತ್ ಮತ ಪ್ರದರ್ಶನದ ನಡೆಸಿದರೆಂದು ವರದಿಯಾಗಿದೆ. ಈ ಪ್ರದರ್ಶನದ ನೇತೃತ್ವವನ್ನು ಕಾ. ಬಿ. ವಾಸುಗಟ್ಟಿ. ಪೂವಯ್ಯ ಬಂಗೇರ, ಸಂಜೀವ ಬಂಗೇರ, ಬಿ. ನಾರಯಣ ಬಿ. ಗೋಪಾಲಗೌಡ, ಶ್ರೀಮತಿ. ಗಿರಿಜಮ್ಮ, ಕೃಷ್ಣಪ್ಪ ಸಾಲಿಯಸ್ ಮತ್ತು ಬಿ. ಚಂದ್ರಪ್ಪ ನಾಯ್ಕ ವಹಿಸಿದ್ದರೆಂದು ಹೇಳಿಕೆ ತಿಳಿಸಿದೆ.

ವಿಧಾನ ಸಭೆಯಲ್ಲಿ

12 ಕಾಲೇಜುಗಳು ಸೀಟು ನಿಯಮ ಉಲ್ಲಂಘಿಸಿವೆ

ರಾಜ್ಯದಲ್ಲಿ 27 ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಿದ್ದು 8 ಸರಕಾರದ ಅನುದಾನ ಪಡೆಯುತ್ತಿವೆ ಅವು ಪಡೆದ ಒಟ್ಟು ಅನುದಾನ 3 ಕೋಟಿ 42 ಲಕ್ಷ ರೂಪಾಯಿಗಳು. ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಿಗೆ ಸರಕಾರ ಸೀಟುಗಳ ಗರಿಷ್ಠ ಸಂಖ್ಯೆ ನಿಗದಿಪಡಿಸುತ್ತದೆ. ಇದನ್ನು ಮೀರಿ ಸರಕಾರದ ನಿಯಮವನ್ನು 12 ಕಾಲೇಜುಗಳು ಉಲ್ಲಂಘಿಸಿವೆ. ವಿಧಾನಸಭೆಯು ಸಿ.ಪಿ ಐ (ಎಂ) ಶಾಸಕ ಆರ್. ವೆಂಕಟರಾಮಯ್ಯನವರ ಪ್ರಶ್ನೆಯೊಂದಕ್ಕೆ ಸದ್ಯದ ಅಧಿವೇಶನದ ಮೊದಲ ದಿನ ದೊರೆತ ಉತ್ತರದಿಂದ ತಿಳಿದು ಬಂದಿರುವ ಅಂಶವಿದು.

ಪ್ರೌಢಶಾಲೆ ಹಂತದ ವರೆಗಿನ ಶಿಕ್ಷಣದ ಕುರಿತು ಸಿ.ಪಿ.ಐ.(ಐ) ಶಾಸಕರು ಕೇಳಿದ ಇನ್ನೊಂದು ಪ್ರಶ್ನೆಗೆ ದೊರೆತ ಉತ್ತರದ ಪ್ರಕಾರ ಸರ್ಕಾರ ಅಧ್ಯಾಪಕರ ನೇಮಕಾತಿಯನ್ನು ಪ್ರೌಢಶಾಲೆಗಳ ಮಟ್ಟದಲ್ಲಿ ವಿದ್ಯಾರ್ಥಿ ಸಂಖ್ಯೆಯ ಆಧಾರದ ಮೇಲೆ ಮಾಡುತ್ತದೆಯಾದರೂ, ಪ್ರಾಥಮಿಕಮಟ್ಟದಲ್ಲಿ ನೇಮಕಾತಿ ಈಆಧಾರದಮೇಲಲ್ಲಪ,ಾಥಮಿಕ ಹಾಗೂ ಮಾಧ್ಯಮಿಕ ಹಂತದಲ್ಲಿ ಸರಕಾರೀ ಶಾಲೆಗಳದ್ದೇ ಸಿಂಹ ಪಾಲು- ಒಟ್ಟು 38550 ಶಾಲೆಗಳಲ್ಲಿ 35580 ಸರ್ಕಾರೀ ಶಾಲೆಗಳು (92%) ಆದರೆ ಪ್ರೌಢಶಾಲೆಯ ಮಟ್ಟದಲ್ಲಿ ಪರಿಸ್ಥಿತಿ ತದ್ವಿರುದ್ಧ. ಒಟ್ಟು 4077 ಪ್ರೌ... ಶಾಲೆಗಳಲ್ಲಿ 2657 ಖಾಸಗೀ ಶಾಲೆ... (65%), ಸ್ವಂತ ಕಟ್ಟಡ ಹೊ... ರುವ ಸರ್ಕಾರೀ ಪ್ರೌಢಶಾಲೆಗಳ ಸಂ... ಸುಮಾರು 50% (1420 ರ... 709ಕ್ಕೆ ಮಾತ್ರ). ಖಾಸಗೀ ಪ್ರೌ... ಶಾಲೆಗಳಿಗೆ ಸಂಬಂಧಪಟ್ಟಂತೆ ಈ ... ಅಂಶ ಕೊಡಲಾಗಿಲ್ಲ.

ನೀರಾವರಿ ಯೋಜನೆಗಳು : ರಾ... ದಲ್ಲಿ 6ನೇ ಹಾಗೂ 7ನೇ ಪಂಚ... ರ್ಷಿಕ ಯೋಜನೆಗಳಲ್ಲಿ ಭಾ... ಮಧ್ಯಮ ಮತ್ತು ಸಣ್ಣ ಪ್ರಮಾಣ... ನೀರಾವರಿಗಳ ಸಂಖ್ಯೆ, ಮಾಡಲಾ... ಖರ್ಚು ಹಾಗೂ ಆಗಾಗ ಬರಗಾಲ... ತುತ್ತಾಗುವ ಕೋಲಾರ ಜಿಲ್ಲೆಯ... ನೀರಾವರಿ ಯೋಜನೆಗಳ ಕುರಿ... ಕೇಳಿದ ಪ್ರಶ್ನೆಗೆ ಉತ್ತರವಾಗಿ ದೊರೆ... ಅಂಕಿ ಅಂಶಗಳು ಹೀಗಿವೆ.

6ನೇ ಯೋಜನೆಯಲ್ಲಿ 2 ಭಾರಿ... ನೀರಾವರಿ, 2 ಮಧ್ಯಮ ನೀರಾವ... ಹಾಗೂ 1334 ಸಣ್ಣ ನೀರಾವ... ಕಾಮಗಾರಿಗಳನ್ನು ತೆಗೆದುಕೊಳ್ಳಲಾ... ಯಿತು. ಭಾರೀ ನೀರಾವರಿ ಯೋಜನೆ... ಗಳಲ್ಲಿ ಒಂದು ದಕ್ಷಿಣ ಕನ್ನಡ ಜಿಲ್ಲೆ... ಯಲ್ಲಿದ್ದರೆ, ಇನ್ನೊಂದು ಹಾಸನ... ಜಿಲ್ಲೆಯಲ್ಲಿದೆ. ಮಾಧ್ಯಮ ನೀರಾವರಿ... ಕಾಮಗಾರಿಗಳೆರಡೂ ಮೈಸೂರು ಜಿಲ್ಲೆ... ಯದು. ಒಟ್ಟು 1334 ಸಣ್ಣ ನೀರಾ... ವರಿಗಳಲ್ಲಿ ಕೋಲಾರ ಜಿಲ್ಲೆಯಲ್ಲಿನ... ಕಾಮಗಾರಿಗಳ ಸಂಖ್ಯೆ 113 ಹಾಗೂ... 7ನೇ ಯೋಜನೆಯಲ್ಲಿನ ಇದುವರೆಗಿನ... 241 ಕಾಮಗಾರಿಗಳಲ್ಲಿ 9 ಕೋಲಾರ... ಜಿಲ್ಲೆಯಲ್ಲಿವೆ. 7ನೇ ಯೋಜನೆಯಲ್ಲಿ... ಯಾವುದೇ ಭಾರಿ ಅಥವಾ ಮಧ್ಯಮ... ನೀರಾವರಿ ಯೋಜನೆಗಳನ್ನು ಕೈಗೆತ್ತಿ... ಕೊಳ್ಳಲಾಗಿಲ್ಲ.

ಪಾಕಿಸ್ತಾನದಲ್ಲಿ ಮುಂದುವರಿಯುತ್ತಿರುವ ಹೋರಾಟ

(ಒಂದನೇ ಪುಟದಿಂದ)

ಪದಚ್ಯುತಿಗೊಳಿಸಿ ಸೈನಿಕ ಆಡಳಿತೆಯನ್ನು ಕೊನೆಗೊಳಿಸಲು ಹಿಂಸಾತ್ಮಕ ಚಳುವಳಿ ನಡೆಸಿದ್ದಾರೆ. ಜಿಯಾ ತನ್ನ ಸರ್ವಶಕ್ತಿಯನ್ನುಪಯೋಗಿಸಿ ಜನತಾ ಚಳುವಳಿಯನ್ನು ನಾಶಗೊಳಿಸಲು ಹೊರಟಿದ್ದಾನೆ. ಆದರೆ ಅವನ ಮಿಲಟರಿ ಆಡಳಿತೆ ಕೊನೆಗೊಳ್ಳಲು ಹೆಚ್ಚು ದಿವಸ ಹಿಡಿಯಲಿಕ್ಕಿಲ್ಲ.

ಕಳೆದ 39 ವರ್ಷಗಳಲ್ಲಿ ಪಾಕಿಸ್ತಾನದ ಆಡಳಿತೆ ಅಮೆರಿಕನ್ ಸಾಮ್ರಾಜ್ಯ ಶಾಹಿಯನ್ನವಲಂಬಿಸಿದೆ. ಭಾರತದ ವಿರುದ್ಧ ಪಾಕಿಸ್ತಾನವನ್ನು ಎತ್ತಿ ಕಟ್ಟಲು ಅಮೇರಿಕ ಅದಕ್ಕೆ ಅಪಾರ ಧನ ಸಹಾಯ, ಶಸ್ತ್ರಾಸ್ತ್ರ ನೀಡುತ್ತ ಬಂದಿದೆ. ಸಾಮಾಜಿಕ ಆರ್ಥಿಕ ಬೆಳವಣಿಗೆ ಆಗಲಿಲ್ಲ ಬಂಡವಾಳಶಾಹಿ ಮತ್ತು ಪಾಳೆಗಾರಿ ಶಕ್ತಿಗಳನ್ನು ರಕ್ಷಿಸಿ ಪ್ರೋತ್ಸಾಹಿಸಿತು. ಈಗಲೂ ಕೋಟ್ಯಾಧಿ ರೂಪಾಯಿ ಬೆಲೆಯ ಆಹಾರ ಧಾನ್ಯ ಅಮೇರಿಕದಿಂದ ಆಮದು ಮಾಡಲಾಗುತ್ತಿದೆ. ಭೂಮಿ ಜಮೀನ್ದಾರರ ವಶದಲ್ಲಿದೆ ಜನರೆಲ್ಲ ಭೂಮಿಗಾಗಿ ತಡಪಡಿಸುತ್ತಿದ್ದಾರೆ ಗ್ರಾಮಾಂತರ ಪ್ರದೇಶಗಳಲ್ಲಿ ಪಾಳೆಯಗಾರಿ ಪದ್ಧತಿಯನ್ನು ಮುಂದುವರಿಸಲಾಗುತ್ತಿದೆ. ಆ ಕಾರಣದಿಂದಾಗಿ ಆಹಾರ ಧಾನ್ಯದ ಪರಾವಲಂಬನೆ ನಿರುದ್ಯೋಗ, ಅತಿಪ್ರಸರಣಗಳು. ಹೆಚ್ಚಾಗುತ್ತ ಹೊರಟಿವೆ.

1947ರಲ್ಲಿ ಸ್ವಾತಂತ್ರ್ಯ ಪಡೆದ ನಂತರ ಸ್ವಾತಂತ್ರ್ಯದ ಉಸಿರಾಡಲು ಅವಕಾಶ ಸಿಗದೆ ಹೆಚ್ಚಿನ ಕಾಲ ಮಿಲಿಟರಿ ಆಡಳಿತೆಯಲ್ಲಿ ಉಸಿರುಗಟ್ಟಿ ಜೀವಿಸುತ್ತಿದ್ದ ಪಾಕಿಸ್ತಾನದಲ್ಲಿಯ ಬೇರೆ ಬೇರೆ ಜನಾಂಗಳ ಜನತೆಯಲ್ಲಿ ಪಂಜಾಬಿ ಸಿಂಧಿ, ಪಠಾಣ, ಬಲೂಚಿ, ಹಾಗೆಯೇ ಭಾರತದಿಂದ ವಲಸೆಹೋದ ಉರ್ದು ಮಾತನಾಡುವರಲ್ಲಿ ಸ್ವಾತಂತ್ರ್ಯದ ಭಾವನೆ ಮೂಡಿ ಬರುತ್ತಿದೆ. ಆ ಕಾರಣದಿಂದಲೇ ಜಿಯಾರ ಮಿಲಿಟರಿ ಆಡಳಿತೆಯ ವಿರುದ್ಧ ವಿರೋಧ ಪಕ್ಷಗಳು ಪ್ರಾರಂಭಿಸಿರುವ ಚಳುವಳಿಗೆ ಹೆಚ್ಚೆಚ್ಚು ಜನ ಬೆಂಬಲ ಸಿಗುತ್ತಿದೆ. ಎಡ ಪಕ್ಷಗಳು ಪಾಕಿಸ್ತಾನದಲ್ಲಿ ಬಲಿಷ್ಟವಾಗಿಲ್ಲದಿದ್ದರೂ ಕೂಡ ಜನತೆಯ ಈ ಪ್ರಜಾಪ್ರಭುತ್ವಕ್ಕಾಗಿ, ಮಿಲಿಟರಿ ಆಡಳಿತೆಯ ವಿರುದ್ಧ ನಡೆಯುತ್ತಿರುವ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ,

ಯುದ್ಧ ಪಿಪಾಸಿ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತೆ ಮುಂದುವರಿಯುವುದು ಬೇಕಾಗಿದೆ.

ಜಿಯೊನ ಸರ್ವಾಧಿಕಾರಿ ಆಡಳಿತೆಯ ವಿರುದ್ಧ ನಡೆದಿರುವ ಜನತೆಯ ಚಳುವಳಿ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿರುದ್ಧವೂ ಆಗಿದೆ. ಸೋವಿಯತ್ ಯೂನಿಯನ್ ಅಫಘಾನಿಸ್ಥಾನ, ಭಾರತ ಮೊದಲಾದ ದೇಶಗಳೊಡನೆ ಮೈತ್ರಿ ಸಂಬಂಧ ಬೆಳಸಬೇಕೆಂದು ಪಾಕಿಸ್ತಾನದಲ್ಲಿ ಅತಿದೊಡ್ಡ ವಿರೋಧ ಪಕ್ಷದ ಅಧಕ್ಷೆ ಬೆನೆಜಿರ್ ಬುಟ್ಟೋ ಈಗಾಗಲೇ ಸಾರಿದ್ದಾರೆ.

ಜಿಯಾನ ಮಿಲಿಟರಿ ದಬ್ಬಾಳಿಕೆಗೆ ಹಿಂಸಾತ್ಮಕವಾಗಿಯೇ ಉತ್ತರ ನೀಡುತ್ತಿರುವ, ದಬ್ಬಾಳಿಕೆಯನ್ನು ದಬ್ಬಾಳಿಕೆಯಿಂದಲೇ ಎದುರಿಸುತ್ತಿರುವ ಪಾಕಿಸ್ತಾನದ ಜನತೆಯು ಹೋರಾಟ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ ಭಾರತದ ಪ್ರಜಾಪ್ರಭುತ್ವವಾದಿ ದೇಶಪ್ರೇಮಿ ಜನತೆ ಪಾಕಿಸ್ತಾನದ ಪ್ರಜೆಗಳ ಜಿಯಾ ವಿರೋಧಿ ಸಂಗ್ರಾಮಕ್ಕೆ ಸಂಪೂರ್ಣ ಬೆಂಬಲ ನೀಡುತ್ತಿದೆ. ರಾಕ್ಷಸೀ ದಬ್ಬಾಳಿಕೆಯನ್ನು ಎದುರಿಸಿ ಜಯಗಳಿಸುತ್ತಾರೆಂಬ ಆತ್ಮ ವಿಶ್ವಾಸ ಹೊಂದಿವೆ. ಪಾಕಿಸ್ತಾನದಲ್ಲಿ ಜಿಯಾನ ಆಡಳಿತೆಯನ್ನುರುಳಿಸಿ,ಪ್ರಜಾಪ್ರಭುತ್ವ ಸ್ಥಾಪಿಸಿ ಅಮೆರಿಕನ್ ಸಾಮ್ರಾಜ್ಯಶಾಹಿಯ ಒಂದು ಕೊಂಡಿಯನ್ನು ಮುರಿದು ಹಾಕುತ್ತಾರೆ ಪಾಕಿಸ್ತಾನದ ವೀರಜನತೆ ಎಂಬ ವಿಶ್ವಾಸ ಭಾರತೀಯರಿಗಿದೆ. ಪಾಕಿಸ್ತಾನದ ಜನತೆಯ ಹೋರಾಟ ಇನ್ನೂ ತೀವ್ರಗೊಳ್ಳಲಿ, ಸಾರ್ವತ್ರಿಕ ಚುನಾವಣೆ ನಡೆಯಲಿ, ಜಿಯಾ ಸರಕಾರ ಉರುಳಲಿ, ಪ್ರಜಾಪ್ರಭುತ್ವ ನೆಲೆಸಲಿ.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N K. Upadhyaya